ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ ಎಸ್‌ವೈಎಸ್–11/248/2020–21 ದಿನಾಂಕ: 22.02.2021

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 16.02.2021 ರಂದು ಜರುಗಿದ ಸಿಂಡಿಕೇಟ್ 11 ನೇ ಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: 16.02.2021 ರಂದು ಪೂರ್ವಾಹ್ನ 10–30 ಗಂಟೆಗೆ ಜರುಗಿದ ಸಿಂಡಿಕೇಟ್ 11 ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್/ [illegible]/2020-21** **ದಿನಾಂಕ: 22.02.2021.**

ದಿನಾಂಕ 16.02.2021 ರಂದು ಪೂರ್ವಾಹ್ನ 10.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಬೆಂಗಳೂರು ನಗರ ವಿಶ್ವವಿದ್ಯಾನಿಲಯ 11 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ನರಸಿಂಹಮೂರ್ತಿ | ಸಭಾಧ್ಯಕ್ಷರು |
| 2. | ಡಾ: ಹೆಚ್. ಟಿ. ಅರವಿಂದ್ | ಸದಸ್ಯರು |
| 3. | ಪ್ರೊ. ಕೆ. ರಮೇಶ್ | ಸದಸ್ಯರು |
| 4. | ಡಾ: ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 5. | ಡಾ: ಪಿ.ವಿ. ಪದ್ಮಜಾ, | ಸದಸ್ಯರು |
| 6. | ಪ್ರೊ: ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 7. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 8. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 9. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 10. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಡಾ: ಆರ್.ಕೆ. ಚಂದ್ರನಾಥ್ | ಸದಸ್ಯರು |
| 12. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 13. | ಪ್ರೊ. ಬಿ. ರಮೇಶ್<br>ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 14. | ಶ್ರೀಮತಿ ಆರತಿ ಆನಂದ್, ಕೆ.ಎ.ಎಸ್<br>(ಹಿರಿಯ ಶ್ರೇಣಿ)<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಹಾಜರಾಗದ ಸದಸ್ಯರು: ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು, ತಾಂತ್ರಿಕ ಶಿಕ್ಷಣ ನಿರ್ದೇಶಕರು, ಡಾ. ಎಂ. ಮುನಿರಾಜು, ಶ್ರೀ ಹೆಚ್. ಆರ್. ಸತೀಶ್, ಡಾ. ವಿ. ಗಾಯತ್ರಿ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರು

ಕುಲಸಚಿವರು ಸಭೆಗೆ ವಂದಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸಭೆಗೆ ಆಹ್ವಾನಿಸಿದರು ಮತ್ತು ಇಂದಿನ ಸಭೆಯ ವಿಷಯ ಸಮೂಹಗಳ ಮೇಲೆ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಅವರ ಅಮೂಲ್ಯವಾದ ಸಲಹೆಗಳನ್ನು ನೀಡಲು ಮನವಿ ಮಾಡಿದರು.

ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್ ರವರು "point of order" ತಿಳಿಸಿ, ಹಿಂದಿನ ಸಭೆಯಲ್ಲಿ (1) ವರ್ಕ್ಸ್ ಕಮಿಟಿ, (2) ಪ್ರೆಸಿಡೆನ್ಸಿ ಮಹಾವಿದ್ಯಾಲಯಕ್ಕೆ ಸ್ವಾಯತ್ತ ನೀಡುವ ಬಗ್ಗೆ ಮತ್ತು (3) ಹೊರಗುತ್ತಿಗೆ ನೌಕರರ ವಿಷಯಗಳನ್ನು ಮುಂದೂಡಲಾಗಿದ್ದು (deferrred) ಆ ವಿಷಯಗಳನ್ನು ಈ ಸಭೆಗೆ ಏಕೆ ಮಂಡಿಸಿರುವುದಿಲ್ಲ ಎಂದು ಕೇಳಿದರು.

ಮಾನ್ಯ ಸಭಾಧ್ಯಕ್ಷರು ಮಾತನಾಡಿ ಆ ಸಭೆಯಲ್ಲಿ ಮುಂದೂಡಲಾದ ವಿಷಯಗಳನ್ನು ಪ್ರಸ್ತುತ ಸಭೆಯಲ್ಲಿ ಟೇಬಲ್ ಅಜೆಂಡವಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ಆರ್. ಕೆ. ಚಂದ್ರನಾಥ್ ರವರು ಮಾತನಾಡಿ ದಿನಾಂಕ 26.01.2021 ರ ಗಣರಾಜ್ಯೋತ್ಸವ ದಿನ ಕುಲಸಚಿವರು ವಿಶ್ವವಿದ್ಯಾನಿಲಯದ ವತಿಯಿಂದ ಪೆರೇಡ್ ನಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಸ್ಮರಣ ಫಲಕವನ್ನು ವಿತರಿಸಲು ಕ್ರಮವಹಿಸಿರುವುದು ಹಾಗೂ ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ವರ್ಗದ ನೌಕರರಲ್ಲಿ ಉತ್ತಮ ಗುಣಮಟ್ಟದ ಕೆಲಸವನ್ನು ನಿರ್ವಹಿಸಿದವರಿಗೆ ಸನ್ಮಾನ ಮಾಡಬೇಕೆಂದು ಯೋಜಿಸಿರುವುದು ಅಭಿನಂದನಾರ್ಹ. ಈ ವಿಷಯವು ಶ್ಲಾಘನೀಯ ಎಂದು ಅಭಿಪ್ರಾಯ ಪಟ್ಟರು. ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

**ವಿಷಯ ಸಂಖ್ಯೆ-1: ದಿನಾಂಕ 30.11.2020 ರಂದು ಜರುಗಿದ 9 ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು ಮತ್ತು ದಿನಾಂಕ 09.12.2020 ರಂದು ಜರುಗಿದ 9ನೇ ಮುಂದುವರೆದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಧೃಢೀಕರಿಸುವ ಕುರಿತು**

**ಸಿಂಡಿಕೇಟ್ ನಿರ್ಣಯ:**

**ನಡಾವಳಿಗಳನ್ನು ಧೃಢೀಕರಿಸಲಾಯಿತು.**

**ವಿಷಯ ಸಂಖ್ಯೆ-2: ದಿನಾಂಕ 30.11.2020 ರಂದು ಜರುಗಿದ 9 ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು ಮತ್ತು ದಿನಾಂಕ 09.12.2020 ರಂದು ಜರುಗಿದ 9ನೇ ಮುಂದುವರೆದ ಸಾಮಾನ್ಯ ಸಿಂಡಿಕೇಟ್ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ವರದಿ**

**ಸಿಂಡಿಕೇಟ್ ನಿರ್ಣಯ:**

**ದಿನಾಂಕ 30.11.2020 & 09.12.2020 ರಂದು ಜರುಗಿದ 9 ನೇ ಸಾಮಾನ್ಯ ಸಿಂಡಿಕೇಟ್ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ವರದಿಗಳನ್ನು ಸಭೆಯು ವೀಕ್ಷಿಸಿ ಅನುಮೋದಿಸಿತು.**

**ವಿಷಯ ಸಂಖ್ಯೆ-3: ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕಿಯೋನಿಕ್ಸ್ ಸಂಸ್ಥೆಯವರ e-Documents Generation System (EDGS) ತಂತ್ರಾಂಶವನ್ನು ಬಳಸಿಕೊಂಡು Online/digital format ನಲ್ಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸುವ ಸಂಬಂಧ ರಚಿಸಲಾಗಿದ್ದ ಸಮಿತಿಯ ವರದಿ ಕುರಿತು.**

ಕುಲಸಚಿವರು (ಮೌಲ್ಯಮಾಪನ) ರವರು ಸರ್ಕಾರ ತನ್ನ ಪತ್ರ ದಿನಾಂಕ 04.07.2020 ರ ಪತ್ರದಲ್ಲಿ ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪ್ರಮಾಣ ಪತ್ರವನ್ನು ಡಿಜಿಟಲ್ format ನಲ್ಲಿ ಅಳವಡಿಸಿ ಕರ್ನಾಟಕ ರಾಜ್ಯದ ಡೇಟಾ ಸೆಂಟರ್‌ನಲ್ಲಿ, ಸಂಗ್ರಹಿಸಲು ಮತ್ತು ಪ್ರತಿಗಳನ್ನು National Academic depositery ಮತ್ತು Digilocker ನಲ್ಲಿ ಖಡ್ಡಾಯವಾಗಿ ಅಳವಡಿಸಿ ಅನುಷ್ಠಾನಗೊಳಿಸಲು ಆದೇಶಿಸಿದೆ ಎಂದು ತಿಳಿಸಿದರು. ಮುಂದುವರೆದು ದಿನಾಂಕ 29.08.2020 ರಂದು ಜರುಗಿದ ಸಿಂಡಿಕೇಟ್ 8 ನೇ ಸಾಮಾನ್ಯ ಸಭೆಯಲ್ಲಿ ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸಲು ತಾಂತ್ರಿಕ ಪ್ರಕ್ರಿಯೆ ಮತ್ತು ಅನುಷ್ಠಾನದ ವಿಧಾನಗಳನ್ನು ಅಧ್ಯಯನ ಮಾಡಲು ಒಂದು ಸಮಿತಿಯನ್ನು ರಚಿಸಿತ್ತು. ಸಿಂಡಿಕೇಟ್ ಸಭೆಯ ತೀರ್ಮಾನದಂತೆ ರಚಿಸಲಾದ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಈ ಸಮಿತಿಯು ಮೈಸೂರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಅಧ್ಯಯನ ಮಾಡಿರುವ ಸಮಿತಿಯ ವರದಿಯ ಪ್ರಮುಖ ಅಂಶಗಳನ್ನು ವಿವರಿಸಿದರು.

ಮುಂದುವರೆದು, EDGS ನ್ನು ಅಳವಡಿಸಿಕೊಂಡಲ್ಲಿ ನಕಲಿ (fake) ಅಂಕಪಟ್ಟಿಗಳ ಹಾವಳಿ ಕಡಿಮೆಯಾಗುತ್ತದೆ, ಉದ್ಯೋಗದಾತ ಸಂಸ್ಥೆಗಳು ಅಂಕಪಟ್ಟಿಗಳ ನೈಜತೆಯನ್ನು ಪರಿಶೀಲನೆ ಮಾಡಲು ಸರಳ ಪ್ರಕ್ರಿಯೆಗಳು ಲಭ್ಯವಾಗುತ್ತದೆ, ಕರ್ನಾಟಕ ಸರ್ಕಾರದ ಸರ್ವರ್ ನಲ್ಲಿ ವಿದ್ಯಾರ್ಥಿಗಳ ಸರ್ಟಿಫಿಕೇಟ್ ಗಳ Digi Locker ವ್ಯವಸ್ಥೆಯಲ್ಲಿ ಸಂಗ್ರಹವಾಗುತ್ತವೆ ಎಂದು ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಹಲವು ವಿಶ್ವವಿದ್ಯಾಲಯಗಳು ಈಗಾಗಲೇ EDGS ನ್ನು ಅಳವಡಿಸಿಕೊಂಡಿರುತ್ತಾರೆ ಈ ಬಗ್ಗೆ ಸರ್ಕಾರ ಮತ್ತು ಕುಲಾಧಿಪತಿಗಳ ಕಛೇರಿಯಿಂದ ಹಲವು ನೆನಪೋಲೆಗಳು ಬಂದು, ತೆಗೆದುಕೊಂಡ ಕ್ರಮದ ಬಗ್ಗೆ ವಿವರಣೆ ಕೇಳುತ್ತಿದ್ದಾರೆ ಮತ್ತು ಇದು ಅತ್ಯವಶ್ಯಕವಾಗಿರುತ್ತದೆ ಎಂದು ತಿಳಿಸಿ ಇದು ಸರ್ಕಾರದ ಆದೇಶವಾಗಿರುವುದರಿಂದ ಅಳವಡಿಸಿಕೊಳ್ಳಬೇಕಾಗಿರುತ್ತದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಮಾತನಾಡುತ್ತಾ, ನಮ್ಮ ಸಮಿತಿಯ ವರದಿಯಲ್ಲಿ ಪ್ರಸ್ತಾಪವಾಗಿರುವಂತೆ EDGS ನ್ನು ವಿಶ್ವವಿದ್ಯಾನಿಲಯವು ಅಳವಡಿಸಿಕೊಳ್ಳಬಹುದು ಆದರೆ, ಸರ್ಕಾರದ ಆದೇಶದಲ್ಲಿ ನಮೂದಾಗಿರುವ ಹಣದ 1/10 ಭಾಗದಷ್ಟು ಮಾತ್ರ ಖರ್ಚಾಗಬಹುದಾಗಿದ್ದು, ಸರ್ಕಾರದ ಆದೇಶದಲ್ಲಿ ದರ ನಿಗಧಿ ಮಾಡಿರುವುದು ಅತ್ಯಂತ ಗರಿಷ್ಟ ಮಟ್ಟದ್ದಾಗಿರುತ್ತದೆ ಎಂದು ಅಭಿಪ್ರಾಯಿಸುತ್ತಾ, ವಿಶ್ವವಿದ್ಯಾನಿಲಯಗಳಿಗೆ ಸರ್ಕಾರ ಮತ್ತು ರಾಜ್ಯಪಾಲರ ಕಛೇರಿಯಿಂದ ನಿರ್ದೇಶನ ನೀಡಿರುವುದನ್ನು ಪರಿಗಣಿಸುವುದು ಕಡ್ಡಾಯವಲ್ಲ ಏಕೆಂದರೆ, ವಿಶ್ವವಿದ್ಯಾನಿಲಯಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯ ಅಡಿಯಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿರುತ್ತವೆ ಎಂದು ಅಭಿಪ್ರಾಯಪಟ್ಟರು.

ಮುಂದುವರೆದು, ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ, ರವರು ಮಾತನಾಡಿ ಕಿಯೋನಿಕ್ಸ್ ಸಂಸ್ಥೆಯಿಂದ ಅನುಷ್ಠಾನಗೊಳಿಸುತ್ತಿರುವ EDGS ತಂತ್ರಾಂಶವು ಉತ್ತಮ ಉಪಯೋಗಿಕ ಅಂಶಗಳನ್ನು ಒಳಗೊಂಡಿದ್ದು, ಸರ್ಕಾರ ಮತ್ತು ರಾಜ್ಯಪಾಲರ ಕಛೇರಿಯ ವಿಶ್ವವಿದ್ಯಾನಿಲಯಗಳ ಒಳಿತಿಗಾಗಿ ಇದನ್ನು ಜಾರಿಗೊಳಿಸಲು ಆದೇಶಿಸಲಾಗಿದ್ದು, ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು. ದೇಶದೆಲ್ಲೆಡೆ e-governance, ಪೇಪರ್ ಲೆಸ್, digitalization ಮುಂದುವರಿಯುತ್ತಿರುವಾಗ (fake) ಅಂಕಪಟ್ಟಿಗಳನ್ನು ತಡೆಯಲು ಅಗತ್ಯವಾಗಿರುವ ಈ ಯೋಜನೆಯನ್ನು ದಿನಾಂಕ 11.09.2020 ರಂದು ನಡೆದ

ಸಭೆಯಲ್ಲಿ EDGS ಒಪ್ಪಲಾಗಿದೆ. life long Adhar link pass word ಆಗಿರುವುದರಿಂದ ವಿದ್ಯಾರ್ಥಿಯು ಎಲ್ಲಿದ್ದರೂ ಸಹ ಅವರುಗಳಿಗೆ ಬೇಕಾಗಿರುವ ಪ್ರಮಾಣ ಪತ್ರವನ್ನು ಪಡೆಯಲು ಸಹಾಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು

ಮಾನ್ಯ ಸದಸ್ಯರಾದ ಡಾ: ಆರ್.ಕೆ. ಚಂದ್ರನಾಥ್, ರವರು ಮಾತನಾಡುತ್ತಾ ಮಾನ್ಯ ಸದಸ್ಯರಾದ ಶ್ರೀನಿವಾಸಯ್ಯ, ರವರ ಅಭಿಪ್ರಾಯಕ್ಕೆ ಸಹಮತ ನೀಡಿ ವಿಶ್ವವಿದ್ಯಾನಿಲಯವು ಸರ್ಕಾರಕ್ಕೆ ವ್ಯತಿರಿಕ್ತವಾಗಿ ಹೊಗಲು ಸಾಧ್ಯವಾಗುವುದಿಲ್ಲ ಆದುದರಿಂದ, ಸದರಿ ಸರ್ಕಾರಿ ಆದೇಶವನ್ನು ಅನುಷ್ಠಾನಗೊಳಿಸಲು ನನ್ನ ಸಹಮತವಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ವಿಶ್ವವಿದ್ಯಾನಿಲಯವು ಸ್ವಾಯತ್ತ ಸಂಸ್ಥೆಯಾಗಿರುವುದರಿಂದ, ಬೇರೆಯದೇ ಆದ entity ಆಗಿರುತ್ತದೆ. ಪ್ರವೇಶಾತಿ, ಪರೀಕ್ಷೆಗಳನ್ನು ನಡೆಸಲು ಸ್ವಾಯತ್ತತೆ ಇರುತ್ತದೆ. EDGS ಅನುಷ್ಠಾನಗೊಳಿಸಿದ್ದಲ್ಲಿ, ಪ್ರತಿ ವಿದ್ಯಾರ್ಥಿಗಳಿಂದ ಪಡೆದುಕೊಳ್ಳುವ ಹಣವನ್ನು ಪಾವತಿಸಬೇಕಾಗಿರುವುದರಿಂದ, ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ/ಪೋಷಕರಿಗೆ ಹೊಣೆಗಾರರಾಗಬೇಕಾಗುತ್ತದೆ ಎಂದು ತಿಳಿಸಿ ಪ್ರತಿ ಸರ್ಟಿಫಿಕೇಟ್‌ಗೆ ನಿಗಧಿಗೊಳಿಸಿರುವ ಮೊತ್ತವು ಅತಿ ಗರಿಷ್ಟವಾಗಿರುವುದರಿಂದ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಆರ್ಥಿಕ ಹೊರೆಯಾಗುತ್ತದೆ ಎಂದು ತಿಳಿಸಿದರು ಹಾಗೂ ಸರ್ಕಾರದ ಆದೇಶ ಹೊರಡಿಸಿದ್ದರೂ ಸಹ ಸಿಂಡಿಕೇಟ್ ನಿರ್ಣಯವೇ ಅಂತಿಮವಾಗಿರುತ್ತದೆ ಎಂದು ಅಭಿಪ್ರಾಯಿಸಿದರು.

ಮಾನ್ಯ ಸದಸ್ಯರಾದ ಡಾ: ಹೆಚ್.ಟಿ.ಅರವಿಂದ್ ರವರು ಮಾತನಾಡಿ ಸರ್ಕಾರ ಹೊರಡಿಸಿರುವ ಎರಡು ಆದೇಶಗಳ ಪ್ರತಿಗಳು ಇಲ್ಲಿ ಇವೆ ಮತ್ತು ಈ ಆದೇಶಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಈ ಬಗ್ಗೆ ಚರ್ಚೆಮಾಡಲು ಯಾವುದೇ ವಿಷಯ (scope) ಇರುವುದಿಲ್ಲ. ಈ ವ್ಯವಸ್ಥೆಯನ್ನು ಜಾರಿಗೆ ತರಲೇಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮಾನ್ಯುಯಲ್ (manual) ಅಂಕಪಟ್ಟಿಗಳಿಗೂ ಸಹ ಪ್ರತಿ ವಿದ್ಯಾರ್ಥಿಯಿಂದ ಅಂಕಪಟ್ಟಿ ಶುಲ್ಕವನ್ನು ಪಡೆಯುತ್ತಿರುವುದರಿಂದ ಇಲ್ಲಿ ಯಾವ ವ್ಯತ್ಯಾಸವೂ ಕಂಡು ಬರುವುದಿಲ್ಲ. ಸರ್ಕಾರದ ಆದೇಶ ಜಾರಿಗೊಳಿಸಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮತ್ತೊಮ್ಮೆ ಈ ವಿಷಯದ ಬಗ್ಗೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಪ್ರಕಾರ ಸರ್ಕಾರವು ವಿಶ್ವವಿದ್ಯಾನಿಲಯಗಳಿಗೆ ಈ ರೀತಿಯ ಆದೇಶಗಳನ್ನು ನೀಡಲು ಅವಕಾಶವಿಲ್ಲ ಎಂದು ಪುನರುಚ್ಚರಿಸುತ್ತಾ, EDGS ಪ್ರಕ್ರಿಯೆಯಲ್ಲಿ ಸರ್ಟಿಫಿಕೇಟ್‌ಗಳನ್ನು PDF document ರೂಪದಲ್ಲಿ ಸಂಗ್ರಹಿಸಲಾಗುತ್ತದೆ ಅಷ್ಟೆ, ಇದು ಸರಳವಾದ ತಂತ್ರಾಂಶ ಸೇವೆಯಾಗಿದ್ದು, ನಿಗಧಿಗೊಳಿಸಿರುವ ದರ ದುಬಾರಿಯಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗುತ್ತದೆ ಎಂದು ತಿಳಿಸಿದರು. ವಿಶ್ವವಿದ್ಯಾನಿಲಯವು ಯಾವುದಾದರೂ ಸಂಸ್ಥೆಯಿಂದ Cloud ನಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಸಂಗ್ರಹಿಸಲು ಕ್ರಮ ವಹಿಸಬಹುದಾಗಿದ್ದು, EDGS ನ ಅಗತ್ಯವಿರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ. ಟಿ.ಹೆಚ್. ಹರಿಪ್ರಸಾದ್ ರವರು ಮಾತನಾಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯ ಸೆಕ್ಷನ್ 9 ರಲ್ಲಿ powers to issue direction ಅಡಿಯಲ್ಲಿ ರಾಜ್ಯಪಾಲರಿಗೆ ವಿಶ್ವವಿದ್ಯನಿಲಯಗಳಿಗೆ ಆದೇಶಗಳನ್ನು ನೀಡಲು ಅವಕಾಶವಿರುತ್ತದೆ ಎಂದು ಸದರಿ ಸೆಕ್ಷನ್ ನ್ನು ಸಭೆಯಲ್ಲಿ ಓದಿ ತಿಳಿಸಿದರು. ಮುಂದವರೆದು ವಿಶ್ವವಿದ್ಯಾನಿಲಯವು ಸರ್ಕಾರದ ಆದೇಶದ ವಿರುದ್ಧ ಹೋಗಲು ಸಾಧ್ಯವಿಲ್ಲ ಮತ್ತು ಸರ್ಕಾರಕ್ಕೆ ವಿಶ್ವವಿದ್ಯಾನಿಲಯಗಳಿಗೆ ಕಾಲಕಾಲಕ್ಕೆ ನಿರ್ದೇಶನ ನೀಡುವ ಅಧಿಕಾರವಿದೆ ಎಂದು ಅಭಿಪ್ರಾಯಪಟ್ಟರು.

ಈ ವಿಷಯದಲ್ಲಿ ಸದಸ್ಯರುಗಳಾದ ಪ್ರೊ. ಪಿ.ವಿ. ಪದ್ಮಜಾ, ಪ್ರೊ. ಲಿಡಿಯಾ ಪಿ. ಸ್ಯಾಮುಯೆಲ್, ಪ್ರೊ. ಕೆ. ರಮೇಶ್, ಪ್ರೊ. ಥಾಮಸ್ ನೀಲಿಯಾರ, ಅವರುಗಳು ಸರ್ಕಾರದ ಆದೇಶದಂತೆ ಕ್ರಮ ವಹಿಸಲು ಸಹಮತಿ ವ್ಯಕ್ತಪಡಿಸಿದರು.

**ಸಿಂಡಿಕೇಟ್ ನಿರ್ಣಯ:**

**ಸುದೀರ್ಘ ಚರ್ಚೆಯ ನಂತರ ಸಭೆಯು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 16 ಇಜಿಒವಿ 2018, ಬೆಂಗಳೂರು ದಿನಾಂಕ 31.05.2019 ನ್ನು ಅನುಷ್ಠಾನಗೊಳಿಸಲು ಬಹುಮತದಿಂದ ನಿರ್ಣಯಿಸಲಾಯಿತು.**

**ಸದರಿ ನಿರ್ಣಯಕ್ಕೆ ಸಂಬಂಧಿಸಿದಂತೆ EDGS ನ್ನು ಅಳವಡಿಸಿಕೊಳ್ಳಲು ಅನುಮೋದನೆ ನೀಡದ ಸದಸ್ಯರಾದ ಶ್ರೀ. ಕರಣ್‌ಕುಮಾರ್, ಶ್ರೀಮತಿ ಜ್ಯೋತಿ ವಿಜಯ್ ಮತ್ತು ಪ್ರೊ. ಎಂ. ಚಿಕ್ಕಮುನಿಯಪ್ಪ ರವರು ನಮ್ಮ ಸಹಮತವಿಲ್ಲ ಎಂದು ತಿಳಿಸಿ ನಿರ್ಣಯಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು.**

**ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಸಭಾಧ್ಯಕ್ಷರಿಗೆ ಮತ್ತು ಶ್ರೀಮತಿ ಜ್ಯೋತಿ ವಿಜಯ್ ರವರು ಸದಸ್ಯ ಕಾರ್ಯದರ್ಶಿಗಳಿಗೆ ಈ ಸಂಬಂಧ, ಲಿಖಿತವಾಗಿ ತಮ್ಮ ಅಸಮ್ಮತಿ ಪತ್ರವನ್ನು ಇ-ಮೇಲ್ ಮುಖಾಂತರ ಕಳುಹಿಸಿರುತ್ತಾರೆ. ಸದಸ್ಯರಾದ ಪ್ರೊ. ಎಂ. ಚಿಕ್ಕಮುನಿಯಪ್ಪ ರವರು ಲಿಖಿತವಾಗಿ ಅಸಮ್ಮತಿ ಪತ್ರವನ್ನು ನೋಟನ್ನು ಕಳುಹಿಸಿರುವುದಿಲ್ಲ.**

**ವಿಷಯ ಸಂಖ್ಯೆ-4: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಸಂಶೋಧನಾ ಕೇಂದ್ರಗಳ ಮಾನ್ಯತೆ ಮುಂದುವರಿಸುವ ಕುರಿತು ನಿವೃತ್ತ ಕುಲಪತಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಗಳು ಸಂಶೋಧನಾ ಕೇಂದ್ರಗಳಿಗೆ ತನಿಖೆ ನಡೆಸಿ ಸಲ್ಲಿಸಿರುವ ವರದಿಗಳನ್ನು ಪರಿಗಣಿಸುವ ಬಗ್ಗೆ.**

ಸಭಾಧ್ಯಕ್ಷರು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಸಂಶೋಧನಾ ಕೇಂದ್ರಗಳ ಮಾನ್ಯತೆ ಕುರಿತು ನಿವೃತ್ತ ಕುಲಪತಿಗಳ ಸಮಿತಿಯನ್ನು ರಚಿಸಿ, ಸಂಶೋಧನಾ ಕೇಂದ್ರಗಳಿಗೆ ತನಿಖೆ ನಡೆಸಿ ವರಿದಿಗಳನ್ನು ಸಲ್ಲಿಸಲು ಕೋರಲಾಗಿತ್ತು ಅದರಂತೆ ನಿವೃತ್ತ ಕುಪತಿಗಳ ಸಮಿತಿಯವರು 22 ಸಂಶೋಧನಾ ಕೇಂದ್ರಗಳ ಮಾನ್ಯತೆ ಕುರಿತು ವರದಿಯನ್ನು ಸಲ್ಲಿಸಿದ್ದಾರೆ. ದಿನಾಂಕ 21.01.2021 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಈ ವರದಿಗಳನ್ನು ಮಂಡಿಸಲಾಗಿತ್ತು ಮತ್ತು ವಿದ್ಯಾವಿಷಯಕ ಪರಿಷತ್ತು ಈ ವರದಿಗಳನ್ನು ಅನುಮೋದಿಸಿವೆ ಎಂದು ತಿಳಿಸಿ, ಸಿಂಡಿಕೇಟ್ ಸಭೆಯು ಈ ವರದಿಗಳನ್ನು ಪರಿಶೀಲಿಸಿ ನಿರ್ಣಯವನ್ನು ಅಭಿವ್ಯಕ್ತ ಪಡಿಸಲು ಕೋರಿದರು.

ವಿವಿಧ ಸಮಿತಿಗಳು ನೀಡಿರುವ ವರದಿಯ ವಿವರಗಳು ಈ ಕೆಳಕಂಡಂತಿದೆ:

**ಪ್ರೊ. ಬಿ. ತಿಮ್ಮೇಗೌಡ ಸಮಿತಿಯ ವರದಿ:**

| Sl.No | Colleges | Subject | Recommendations |
|---|---|---|---|
| 1. | Govt. Arts College | Kannada | Recommended for renewal for the period 2016-17 to 2019-20 |
| 2. | Govt. Arts College | History | Recommended for renewal for the period 2017-18 to 2020-21 |
| 3. | Govt. Arts College | Economics | Recommended for renewal for the period 2017-18 to 2020-21 |

| | | | |
|---|---|---|---|
| 4. | Mount Carmel College (Autonomous) | Economics | Recommended for renewal for the period 2018-19 to 2021-22 |
| 5. | Mount Carmel College (Autonomous) | Food and Nutrition | Recommended for renewal for the period 2018-19 to 2021-22 |
| 6. | Mount Carmel College (Autonomous) | Human Development | Recommended for renewal for the period 2018-19 to 2021-22 |

**ಪ್ರೊ. ಎ. ಜಿ. ತಲವಾರ್ ಸಮಿತಿಯ ವರದಿ**

| Sl.No | Colleges | Subject | Recommendations |
|---|---|---|---|
| 1. | Presidency College | Management | Recommended for renewal for the period 2018-19 to 2021-22 |
| 2. | Adarsh Institute of Management & Information Technology | Management | Renewal Not recommended |
| 3. | R.V Institute of Management | Management | Recommended for renewal for the period 2017-18 to 2020-21 |

**ಪ್ರೊ. ಕೆ. ಎಮ್. ಕಾವೇರಿಯಪ್ಪ ಸಮಿತಿಯ ವರದಿ**

| Sl.No | Colleges | Subject | Recommendations |
|---|---|---|---|
| 1. | Govt. R.C. College of Commerce & Management | Commerce | Recommended for renewal for the period 2019-20 to 2023-24 |
| 2. | Seshadripuram Institute of Management, Studies | Commerce | Renewal Not recommended |
| 3. | St. Joseph's College of Commerce (Autonomous) | Commerce | Recommended for renewal for the period 2019-20 to 2023-24 |
| 4. | Maharani Lakshmi Ammani Women's College (Autonomous) | Kannada | The institution was not prepared to receive the committee hence the question of recognizing the research centre does not arise |
| 5. | KLE Society's S. Nijalingappa College | Commerce | New Committee to constitute to visit |
| 6. | SSMRV College | Commerce | Renewal Not recommended |

**ಪ್ರೊ. ಬಿ. ತಿಮ್ಮೇಗೌಡ ಸಮಿತಿಯ ವರದಿ**

| Sl.No | Colleges | Subject | Recommendations |
|---|---|---|---|
| 1. | St. Joseph's College of Science (Autonomous) | Botany | Recommended for renewal for the period 2018-19 to 2021-22 |
| 2. | St. Joseph's College of Science (Autonomous) | Chemistry | Recommended for renewal for the period 2018-19 to 2021-22 |

| | | | |
|---|---|---|---|
| 3. | BMS College for Women | Chemistry | Recommended for renewal for the period 2018-19 to 2021-22 |
| 4. | Jyothi Nivas College (Autonomous) | Chemistry | Recommended for renewal for the period 2017-18 to 2020-21 |
| 5. | International Institute for Training and Research in Reproductive Health | Bio-Chemistry | Not recommended w.e.f 2018-19 |
| 6. | CSIR – Central Institute of Medical and Aromatic Plants Research Cntre | Life Science | Recommended for renewal for the period 2021-22 to 2023-24 |

ಪ್ರೊ. ಓ. ಅನಂತ್‌ರಾಮಯ್ಯ ಸಮಿತಿಯ ವರದಿ

| Sl.No | Colleges | Subject | Recommendations |
|---|---|---|---|
| 1. | College of Fine Arts | Fine Arts | Recommended for renewal of recognition of the research center as stipulated in the center recognition guidelines |
| 2. | R.V. Teachers College | Education | Revisit |
| 3. | Vijaya Teachers College | Education | Not Recommended renewal frim the year 2020-21 |
| 4. | Govt. Science College (Autonomous) | Mathematics | Recommends renewal as per regulations |
| 5. | Govt. Science College (Autonomous) | Biotechnology | Recoginiton of research senter will not be considered |
| 6. | Govt. Science College(Autonomous) | Chemistry | The There guides who have been recognized as guides in chemistry Department by BUB are renewed under Bengaluru City University till Bengaluru City University regulations are approved |
| 7. | MES College of Arts, Science & Commerce | Kannada | Another term stipulated by the University regulations for recognition of research center |
| 8. | MES College of Arts, Science & Commerce | Mathematics | Recommended for renewal Research center |
| 9. | MP Birla Institute of Fundamental Research | Physics | Recommended for renewal for the period 2020-21 to 2023-24 |

ಸಿಂಡಿಕೇಟ್ ನಿರ್ಣಯ:

ಸಭೆಯು ಸಂಶೋಧನಾ ಕೇಂದ್ರಗಳ ನವೀಕರಣಕ್ಕೆ ಸ್ಥಳೀಯ ವಿಚಾರಣಾ ಸಮಿತಿಗಳು ಸಲ್ಲಿಸಿರುವ ಮತ್ತು ಈಗಾಗಲೇ ವಿದ್ಯಾವಿಷಯಕ ಪರಿಷತ್ ನಲ್ಲಿ ಅನುಮೋದನೆಗೊಂಡಿರುವ ವರದಿಗಳನ್ನು ಅನುಮೋದಿಸಿತು.

**KLE Society College** ಮತ್ತು **R.V. Teachers College** ಗೆ ಮರು ತಪಾಸಣಾ ಸಮಿತಿಯನ್ನು ರಚಿಸಿ, ವರದಿ ಪಡೆದುಕೊಳ್ಳಲು ತೀರ್ಮಾನಿಸಿತು.

ವಿಷಯ ಸಂಖ್ಯೆ-5: ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕ / ಸಹ-ಪ್ರಾಧ್ಯಾಪಕರು ಮಾತೃ ವಿಶ್ವವಿದ್ಯಾಲಯಕ್ಕೆ ಹಿಂದಿರುಗುವ ಇಚ್ಚೆ ಹೊಂದಿ ಸಲ್ಲಿಸಿರುವ ಮನವಿಗಳ ಬಗ್ಗೆ.

ಸದಸ್ಯರಾದ ಶ್ರೀ. ಆರ್. ಕೆ ಚಂದ್ರನಾಥ್ ರವರು ಮಾತನಾಡಿ, ಹಿಂದಿರುಗಲು ಇಚ್ಛಿಸಿರುವ ಪ್ರಾಧ್ಯಾಪಕರು/ಸಹ-ಪ್ರಾಧ್ಯಾಪಕರಿಂದ ಏನೂ ನಿರೀಕ್ಷೆ ಮಾಡಲು ಆಗುವುದಿಲ್ಲ. ಅವರನ್ನು ಮಾತೃ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀ. ಕರಣ್ ಕುಮಾರ್ ಮತ್ತು ಶ್ರೀ. ಹೆಚ್. ಎನ್. ಹರಿಪ್ರಸಾದ್ ರವರು ಶೈಕ್ಷಣಿಕ ವರ್ಷ ಮುಗಿಯುವವರೆಗೂ ಅವರ ಸೇವೆ ಪಡೆದು ಹುದ್ದೆ ರಹಿತವಾಗಿ ಅವರನ್ನು ಮಾತೃ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಬಹುದೆಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ:

ಮಾತೃ ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಲು ಇಚ್ಛಿಸಿರುವ ಪ್ರಾಧ್ಯಾಪಕರು/ಸಹ-ಪ್ರಾಧ್ಯಾಪಕ ರವರನ್ನು ಶೈಕ್ಷಣಿಕ ವರ್ಷ ಮುಗಿದ ನಂತರ ಹುದ್ದೆ ರಹಿತ ಮಾತೃ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಲು ನಿರ್ಧರಿಸಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪತ್ರ ವ್ಯವಹಾರ ಮಾಡಲು ಅನುಮತಿಸಿತು.

ವಿಷಯ ಸಂಖ್ಯೆ-6: ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಗೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ

ಸಭಾಧ್ಯಕ್ಷರು ಮಾತನಾಡಿ ಕಲೆ. ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳಲ್ಲಿ ಜೇಷ್ಠತಾ ಪಟ್ಟಿ ಪ್ರಕಾರ ಪ್ರಾಧ್ಯಾಪಕರನ್ನು ವಿವಿಧ ವಿಭಾಗಗಳಿಗೆ ಅಧ್ಯಕ್ಷರನ್ನಾಗಿ 2 ವರ್ಷಗಳ ಅವಧಿಗೆ ನೇಮಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ:

ಸಿಂಡಿಕೇಟ್ ಸಭೆಯು ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗಕ್ಕೆ ಪ್ರೊ. ಎನ್. ನರಸಿಂಹಮೂರ್ತಿ, ವಾಣಿಜ್ಯ ವಿಭಾಗಕ್ಕೆ ಪ್ರೊ. ಎಂ. ಮುನಿನಾರಾಯಣಪ್ಪ, ರಸಾಯನಶಾಸ್ತ್ರ ವಿಭಾಗಕ್ಕೆ ಪ್ರೊ. ಎಂ. ಗಾಯಿತ್ರಿ, ಜೀವ-ರಸಾಯನಶಾಸ್ತ್ರ ವಿಭಾಗಕ್ಕೆ ಪ್ರೊ. ವಿ.ಆರ್. ದೇವರಾಜ್ ರವನ್ನು ನೇಮಕ ಮಾಡಲು ನಿರ್ಣಯಿಸಿತು.

ವಿಷಯ ಸಂಖ್ಯೆ-7: ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ವಿಭಾಗಗಳಲ್ಲಿ ಕಾರ್ಯನಿರ್ವಹಿಸಲು 56 ವಿವಿಧ ವೃಂದದ ನೌಕರರ ಸೇವೆ ಪಡೆಯುವ ಬಗ್ಗೆ.

ಕುಲಸಚಿವರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ವಿಭಾಗಗಳಲ್ಲಿ ಕಾರ್ಯನಿರ್ವಹಿಸಲು 56 ವಿವಿಧ ವೃಂದದ ನೌಕರರ ಸೇವೆಯ ಅವಧಿಯು ದಿನಾಂಕ 31.01.2021 ಕ್ಕೆ ಮುಕ್ತಾಯಗೊಂಡಿದೆ ಅವರ ಸೇವೆಯನ್ನು ಮುಂದುವರೆಸಬೇಕಾಗಿರುತ್ತದೆ. ಆದುದರಿಂದ, ಟೆಂಡರ್ ಪ್ರಕ್ರಿಯೆ ಮುಗಿಸಿ, ಕಾರ್ಯಾದೇಶ ನೀಡಲು ಕಾಲಾವಕಾಶ ಬೇಕಾಗಿರುವುದರಿಂದ, ಇವರ ಸೇವೆಯನ್ನು ಟೆಂಡರ್ ಅಂತಿಮಗೊಳಿಸಿ ಕಾರ್ಯಾದೇಶ ನೀಡುವವರೆಗೆ ಮುಂದುವರೆಸಲು ಕೋರಿದರು.

**ಸಿಂಡಿಕೇಟ್ ನಿರ್ಣಯ:**

ಸಭೆಯು ಸರ್ವಾನುಮತದಿಂದ ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 56 ವಿವಿಧ ವೃಂದದ ನೌಕರರ ಸೇವೆಯನ್ನು ಟೆಂಡರ್ ಪ್ರಕ್ರಿಯೆ ಮುಗಿಸಿ, ಕಾರ್ಯಾದೇಶ ನೀಡುವವರೆಗೂ ದಿನಾಂಕ 01.02.2021 ರಿಂದ ಮುಂದುವರಿಸಲು ನಿರ್ಣಯಿಸಿತು.

**ವಿಷಯ ಸಂಖ್ಯೆ–8: ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿನ ಉದ್ಯಾನವನ ಹಾಗೂ ಅದರ ಸುತ್ತಮುತ್ತಲಿನ ರಸ್ತೆಗಳನ್ನು ಸ್ವಚ್ಛಗೊಳಿಸಲು ತೋಟಪಾಲಕರ ಸೇವೆಯನ್ನು ಪಡೆಯುವ ಬಗ್ಗೆ.**

ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿನ ಉದ್ಯಾನವನ ಹಾಗೂ ಅದರ ಸುತ್ತಮುತ್ತಲಿನ ರಸ್ತೆಗಳನ್ನು ಸ್ವಚ್ಛಗೊಳಿಸಲು ತೋಟಪಾಲಕರ ಸೇವೆಯು ದಿನಾಂಕ 31.01.2021 ಕ್ಕೆ ಮುಕ್ತಾಯಗೊಂಡಿರುವುದರಿಂದ, ಇವರ ಸೇವೆಯನ್ನು ಮುಂದುವರೆಸಲು ನರ್ಸರಿಮೆನ್ ಕೋ–ಆಪರೇಟಿವ್ ಸೊಸೈಟಿ ರವರಿಂದ ದರಪಟ್ಟಿಯನ್ನು ಪಡೆದು ಅಂಗೀಕೃತಗೊಂಡ ನಂತರ ಕಾರ್ಯಾದೇಶವನ್ನು ನೀಡುವವರೆಗೆ ಇವರ ಸೇವೆಯನ್ನು ಪಡೆಯಲು ಅನುಮತಿ ಕೋರಿದರು.

**ಸಿಂಡಿಕೇಟ್ ನಿರ್ಣಯ:**

ಸಭೆಯು ಸರ್ವಾನುಮತದಿಂದ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿನ ಉದ್ಯಾನವನ ಹಾಗೂ ಅದರ ಸುತ್ತಮುತ್ತಲಿನ ರಸ್ತೆಗಳನ್ನು ಸ್ವಚ್ಛಗೊಳಿಸಲು ತೋಟಪಾಲಕರ ಸೇವೆಯನ್ನು ಮುಂದುವರೆಸಲು ಅನುಮತಿಸಿತು.

**ವಿಷಯ ಸಂಖ್ಯೆ–9: ಶ್ರೀ ವಿ. ತಿಪ್ಪೇಸ್ವಾಮಿ, ಸಮಾಲೋಚಕರು ಅವರ ಸೇವೆಯನ್ನು ಕಾನೂನು ಸಮಾಲೋಚಕರಾಗಿ ನೇಮಿಸಿ ಮುಂದುವರೆಸುವ ಬಗ್ಗೆ.**

ಕುಲಸಚಿವರು (ಮೌ) ರವರು ಮಾತನಾಡಿ, ಶ್ರೀ. ವಿ. ತಿಪ್ಪೇಸ್ವಾಮಿ ರವರಿಗೆ ಫೆಬ್ರವರಿ ತಿಂಗಳಿಗೆ 70 ವರ್ಷಗಳು ಮುಗಿಯುವುದರಿಂದ, ಅವರು ಬಾರ್ ಕೌನ್ಸಿಲ್ ನಲ್ಲಿ ರಿಜಿಸ್ಟರ್ಡ್ ಅಡ್ವೋಕೇಟ್ ಆಗಿರುವುದರಿಂದ ಪರೀಕ್ಷಾ ವಿಭಾಗ ಮತ್ತು ಆರ್.ಟಿ.ಐ ಹಾಗೂ ಇನ್ನಿತರೆ ಕೋರ್ಟ್ ಕೇಸ್‌ಗಳಿಗೆ ಸಂಬಂಧಿಸಿದಂತೆ ವಿಷಯ ನಿರ್ವಾಹಕರಾಗಿ ಇದುವರೆವಿಗೂ ನಡೆಸಿಕೊಂಡು ಹೋಗುತ್ತಿದ್ದರು ಆದುದರಿಂದ ಸದರಿಯವರ ಸೇವೆಯನ್ನು ಕಾನೂನು ಸಮಾಲೋಚಕರನ್ನಾಗಿ ನೇಮಿಸಿಸಲು ಕೋರಿದರು.

ಸದಸ್ಯರಾದ ಶ್ರೀ. ಹೆಚ್.ಎನ್.ಹರಿಪ್ರಸಾದ್ ರವರು ಮಾತನಾಡಿ, ಕಾನೂನು ಸಮಾಲೋಚಕರನ್ನಾಗಿ ನೇಮಿಸಲು ಅದಕ್ಕೆ ಬೇರೆ ಬೇರೆ ಮಾನದಂಡಗಳಿವೆ ಆದುದರಿಂದ, ಕಾನೂನು ಸಮಾಲೋಚಕರನ್ನಾಗಿ ನೇಮಿಸಲು ಅವಕಾಶವಿಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ. ಹೆಚ್. ಟಿ. ಅರವಿಂದ್ ರವರು ಮಾತನಾಡಿ, ಈಗಾಗಲೇ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ 70 ವರ್ಷ ಮೇಲ್ಪಟ್ಟವರನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗಕ್ಕೆ ಅವಕಾಶ ನೀಡಬಾರದೆಂದು ನಿರ್ಣಯಿಸಿರುವುದರಿಂದ, ಇವರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

ಸದರಿ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ನಿರ್ಣಯಿಸಲಾಯಿತು ಮತ್ತು ಪರೀಕ್ಷಾ ವಿಭಾಗಕ್ಕೆ ಶ್ರೀ. ತಿಪ್ಪೇಸ್ವಾಮಿ ರವರ ಬದಲಿಗೆ ಬೇಕಾಗಿರುವ ಅನುಭವವುಳ್ಳ, ಅರ್ಹ ಸಮಾಲೋಚಕರನ್ನು ನೇಮಕ ಮಾಡಿಕೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಿತು.

ವಿಷಯ ಸಂಖ್ಯೆ–10: 2020–21 ನೇ ಸಾಲಿಗೆ ನಗರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಸಂಯೋಜಕರ ನೇಮಕ ಮಾಡುವ ಬಗ್ಗೆ

ಕುಲಸಚಿವರು ಸಭೆಯನ್ನು ಉದ್ದೇಶಿಸುತ್ತಾ ಮಾತನಾಡಿ ಈ ಪ್ರಸ್ತಾವನೆಯಲ್ಲಿರು ಸಂಯೋಜಕರನ್ನು ಈಗಾಗಲೇ ನೇಮಿಸಲಾಗಿದೆ. ನೇಮಕ ಮಾಡಿರುವ ಆದೇಶವನ್ನು ಸ್ಥಿರೀಕರಣಕ್ಕಾಗಿ ಸಿಂಡಿಕೇಟ್ ಮುಂದೆ ಮಂಡಿಸಿದೆ ಮತ್ತು ಅವರಿಗೆ ಭತ್ಯೆ ರೂ. 10,000/– ಗಳನ್ನುನೀಡುತ್ತಿದ್ದು, ಸದರಿ ವಿಷಯವು ಲೆಕ್ಕ ತಪಾಸಣೆ ಆಕ್ಷೇಪಣೆಗೆ ಒಳಪಟ್ಟಿರುವುದರಿಂದ, ರೂ. 10,000/– ಗಳನ್ನು ನೀಡದೇ ಇರುವ ಬಗ್ಗೆ ವಿಶ್ವವಿದ್ಯಾನಿಲಯವು ನಿರ್ಣಾಯಿಸಿದೆ ಎಂದು ಸಭೆಯ ಗಮನಕ್ಕೆ ತಂದರು.

ಸಿಂಡಿಕೇಟ್ ನಿರ್ಣಯ:

ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಸಂಯೋಜಕರ ನೇಮಕ ಮಾಡಲಾದ ಆದೇಶವನ್ನು ಸ್ಥಿರೀಕರಣ ಮಾಡಲಾಯಿತು. ರೂ. 10,000/–ಗಳ ಭತ್ಯೆ ನೀಡುತ್ತಿರುವ ಆದೇಶವನ್ನು ಹಿಂಪಡೆಯಲು ಅನುಮತಿ ನೀಡಿತು.

**ವಿಷಯ ಸಂಖ್ಯೆ–11: Proceedings of the 5th Works Committee meeting held on 18.01.2021 and proceedings of the 6th Works Committee meeting held on 01.02.2021**

ಕಾಮಗಾರಿ ಸಮಿತಿಯ ವಿಷಯಗಳ ಚರ್ಚೆ ಆರಂಬಿಸಿದಾಗ ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ಹಾಗೂ ಶ್ರೀಮತಿ ಜ್ಯೋತಿ ವಿಜಯ್ ರವರು ಸಭೆಯಿಂದ ಹೊರನಡೆದರು, ಇತರೆ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

Subject I: Estimate for Providing flooring and repairs to rooms at Animal Science and Plant Science Department, Natural Science Block, Central College Campus, Bengaluru City University, Bengaluru.

ಸಿಂಡಿಕೇಟ್ ನಿರ್ಣಯ:

ದಿನಾಂಕ 18.01.2021 ರಂದು ನಡೆದ **Works Committee** ಯಲ್ಲಿ ಅನುಮೋದನೆಯಾಗಿರುವ **Animal Science and Plant Science Department, Natural Science Block** ಕೆಲಸಗಳನ್ನು ನಿರ್ವಹಿಸಲು ರೂ. 19.00 ಲಕ್ಷಗಳ **Estimate** ನ್ನು ಅವಲೋಕಿಸಿ ಅನುಮೋದಿಸಲಾಯಿತು .

Subject II: Estimate for Converting existing room to Television Studio at Communication Department, P.K. block, Central College Campus, Bengaluru City University, Bengaluru.

ಸಿಂಡಿಕೇಟ್ ನಿರ್ಣಯ:

ದಿನಾಂಕ 18.01.2021 ರಂದು ನಡೆದ **Works Committee** ಯಲ್ಲಿ ಅನುಮೋದನೆಯಾಗಿರುವ **Converting existing room to Television Studio at Communication Department, P.K. block,** ಕೆಲಸಗಳನ್ನು ನಿರ್ವಹಿಸಲು ರೂ. 31.00 ಲಕ್ಷಗಳ **Estimate** ನ್ನು ಅವಲೋಕಿಸಿ ಅನುಮೋದಿಸಲಾಯಿತು.

Subject III:- Estimate for Providing flooring and repairs to Room No. 317, 318 & 319 for Registrar (Evln) office, Natural Science Block, Central College Campus, Bengaluru City University, Bengaluru.

ಸಿಂಡಿಕೇಟ್ ನಿರ್ಣಯ:

ದಿನಾಂಕ: **18.01.2021** ರಂದು ನಡೆದ **Works Committee** ಯಲ್ಲಿ ಅನುಮೋದನೆಯಾಗಿರುವ **flooring and repairs to Room No. 317, 318 & 319 for Registrar (Evln) office,** ಕೆಲಸಗಳನ್ನು ನಿರ್ವಹಿಸಲು ರೂ. **9.50** ಲಕ್ಷಗಳ **Estimate** ನ್ನು ಅವಲೋಕಿಸಿ ಅನುಮೋದಿಸಲಾಯಿತು.

Subject IV:- Estimate for Providing and constructing Toilet Block to the Life Sciences Department, Central College Campus, Bengaluru City University, Bengaluru.

ಸಿಂಡಿಕೇಟ್ ನಿರ್ಣಯ:

ದಿನಾಂಕ: **18.01.2021** ರಂದು ನಡೆದ **Works Committee** ಯಲ್ಲಿ ತೆಗೆದುಕೊಂಡಿರುವ ನಿರ್ಣಯದಂತೆ, **Animal Science and Plant Science Communication Department** ಮತ್ತು ಕುಲಸಚಿವರು ಮೌಲ್ಯಮಾಪನ) ರವರ ಕಛೇರಿಯ ಕಾಮಗಾರಿ ಕೆಲಸಗಳನ್ನು ನಿರ್ವಹಿಸಲು ಕಾಮಗಾರಿ ಸಮಿತಿ ತೆಗೆದುಕೊಂಡಿರುವ ನಿರ್ಣಯವನಬ್ನು ಸಭೆ ಅನುಮೋದಿಸಿತು ಕ್ರಮ ಸಂಖ್ಯೆ 1 ರಿಂದ 4 ರವರೆಗಿನ ಕಾಮಗಾರಿ ನಿರ್ವಹಣೆಗೆ ಸಮಿತಿಯು ತೆಗೆದು ಕೊಂಡಿರುವ ಕ್ರಮದಂತೆ, ನಿರ್ಮಿತಿ ಕೇಂದ್ರಕ್ಕೆ ವಹಿಸಲು ಸಭೆ ನಿರ್ಣಯಿಸಿತು.

**Subject VI:- Redevelopment of Bengaluru City University Campus**

ಸಿಂಡಿಕೇಟ್ ನಿರ್ಣಯ:

ಈ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ–12: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 'Mace' (ಅಧಿಕಾರದಂಡ) ಸಿದ್ದಪಡಿಸಿಕೊಳ್ಳುವ ಸಂಬಂಧ ನಿರ್ಣಯಕ್ಕಾಗಿ.**

ಕುಲಸಚಿವರು (ಮೌ) ರವರು ಸದ್ಯದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮೊದಲನೆಯ ಘಟಿಕೋತ್ಸವವನ್ನು ಆಯೋಜಿಸಬೇಕಾಗಿರುವುದರಿಂದ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇರುವ ಅಧಿಕಾರ ದಂಡವನ್ನು ವೀಕ್ಷಿಸಿಕೊಂಡು ಬಂದಿದ್ದು, ಅಲ್ಲಿ ಅಧಿಕಾರ ದಂಡವು ಮೂರು ಭಾಗಗಳಿದ್ದು, threading type ಇರುತ್ತದೆ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಅಧಿಕಾರ ದಂಡವನ್ನು ಮಾಡಿಸಲು ಅಂದಾಜು 3 ಕೆ.ಜಿ ಬೆಳ್ಳಿ ಮತ್ತು 50 ಗ್ರಾಂ ಚಿನ್ನ ಮತ್ತು ಸುಮಾರು ರೂ. 1.00 ಲಕ್ಷ ಮೇಕಿಂಗ್ ಚಾರ್ಜಸ್ ಅಗತ್ಯವಿರುತ್ತದೆ. ಈ ಅಧಿಕಾರ ದಂಡದ ಮೇಲೆ ವಿಶ್ವವಿದ್ಯಾನಿಲಯದ ಲೋಗೋ ಮೂಡಬೇಕಾಗಿರುತ್ತದೆ ಈ ಪ್ರಸ್ತಾವನೆಯನ್ನು ಅನುಮೋದಿಸಲು ಕೋರಿದರು.

ಸಿಂಡಿಕೇಟ್ ನಿರ್ಣಯ:

ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ **'Mace'** (ಅಧಿಕಾರದಂಡ) ಸಿದ್ಧಪಡಿಸಿಕೊಳ್ಳಲು ಅನುಮೋದಿಸಿತು. ಸದರಿ ಪ್ರಕ್ರಿಯೆಯನ್ನು ನಿಯಮಾನುಸಾರ ಟೆಂಡರ್/ಕೊಟೇಷನ್ ಮೂಲಕ ಕ್ರಮ ವಹಿಸಲು ನಿರ್ಣಯಿಸಲಾಯಿತು.

**ವಿಷಯ ಸಂಖ್ಯೆ-13: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ನೇ ಸಾಲಿನ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಲು ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕುರಿತು.**

ಕುಲಸಚಿವರು (ಮೌ) ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ದಿನಾಂಕ 18.12.2020ರ ಸಿಂಡಿಕೇಟ್ ನಿರ್ಣಯದಂತೆ 2020-21 ನೇ ಸಾಲಿನ ಸ್ನಾತಕ, ಸ್ನಾತಕೋತ್ತರ ಮತ್ತು ಇತರೆ ಕೋರ್ಸುಗಳ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿಕೊಳ್ಳುವ ಸಂಬಂಧ, ಕೆ.ಟಿ.ಪಿ.ಪಿ ಕಾಯ್ದೆಯ ನಿಯಮಾವಳಿಯಂತೆ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿತ್ತು. ದಿನಾಂಕ 17.01.2021 ರಂದು ಟೆಂಡರ್ ಆಹ್ವಾನಿಸಲಾಗಿತ್ತು ಮತ್ತು ದಿನಾಂಕ 05.02.2021 ರಂದು ತಾಂತ್ರಿಕ ಪರಿಶೀಲನಾ ಸಮಿತಿಯಲ್ಲಿ ಬಿಡ್‌ದಾರರ ಅರ್ಹತೆಯನ್ನು ಪರಿಶೀಲಿಸಲಾಯಿತು. ಒಟ್ಟು 3 ಸಂಸ್ಥೆಗಳಿಂದ ಟೆಂಡರ್‌ನ ಬಿಡ್‌ದಾರರಾಗಿ ಭಾಗವಹಿಸಿದ್ದು, 2 ಸಂಸ್ಥೆಗಳು ತಾಂತ್ರಿಕ ಅರ್ಹತೆಯನ್ನು ಪಡೆದಿಲ್ಲವಾದ್ದರಿಂದ, ಏಕ ಬಿಡ್‌ದಾರರು ಅರ್ಹತೆ ಹೊಂದಿದ ಕಾರಣಕ್ಕಾಗಿ ಸಮಿತಿಯು ಎರಡನೆ ಬಾರಿಗೆ ಟೆಂಡರ್ ಕರೆಯಲು ಶಿಫಾರಸ್ಸು ಮಾಡಿತು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಮಿಸ್ಟರ್ ಪರೀಕ್ಷೆಗಳು ಮಾರ್ಚ್ 08, 2021 ರಿಂದ ಪ್ರಾರಂಭವಾಗುತ್ತಿರುವುದರಿಂದ, ಪ್ರಶ್ನೆ ಪತ್ರಿಕೆಗಳನ್ನು ಸಕಾಲಕ್ಕೆ ಮುದ್ರಿಸಬೇಕಿರುವುದರಿಂದ, ಈ ಬಾರಿ ಅಲ್ಪಾವಧಿ ಟೆಂಡರ್‌ನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿ, ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ತಾಂತ್ರಿಕ ಪರಿಶೀಲನಾ ಸಮಿತಿ ಶಿಫಾರಸ್ಸು ಮಾಡಿರುತ್ತದೆ. ಅದರಂತೆ ಕ್ರಮವಹಿಸಲಾಗಿದ್ದು, ವಹಿಸಿರುವ ಕ್ರಮಕ್ಕೆ ಸಿಂಡಿಕೇಟಿನ ಅನುಮೋದನೆಯನ್ನು ಕೋರಲಾಯಿತು.

**ಸಿಂಡಿಕೇಟ್ ನಿರ್ಣಯ:**

**ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ನೇ ಸಾಲಿನ ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯಲ್ಲಿರುವಂತೆ ನಿಯಮಾನುಸಾರ ಮುಂದಿನ ಕ್ರಮ ವಹಿಸಲು ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ-14: ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ 2019-20 ನೇ ಸಾಲಿನ ಸ್ನಾತಕೋತ್ತರ ಪದವಿ ಪೂರೈಸುವ ವಿಜೇತ ವಿದ್ಯಾರ್ಥಿಗಳಿಗೆ ಮತ್ತು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿ ಪೂರೈಸುವ ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು ನಗದು ಬಹುಮಾನಗಳನ್ನು ನೀಡುವ ಸಂಬಂಧ**

ಕುಲಸಚಿವರು (ಮೌ) ರವರು ಅತಿ ಹೆಚ್ಚು ಅಂಕಗಳು ಪ್ರಥಮ ರ‍್ಯಾಂಕ್ ಪಡೆದ ಪಿ.ಜಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕವನ್ನು ವಿತರಿಸುವ ಬಗ್ಗೆ ದಿನಾಂಕ 09.12.2020 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚಿನ್ನದ ಪದಕ ಮತ್ತು ನಗದು ಬಹುಮಾನ ನೀಡಲು ಅನುಮೋದಿಸಿದೆ. ಸ್ನಾತಕ & ಸ್ನಾತಕೋತ್ತರ ವ್ಯಾಸಂಗಗಳಲ್ಲಿ ಸ್ಥಾಪಿಸಬಹುದಾದ ಚಿನ್ನದ ಪದಕಗಳ ಕುರಿತು ವಿಸ್ತೃತ ಪಟ್ಟಿಯನ್ನು ಈ ಸಭೆಯಲ್ಲಿ ಮಂಡಿಸಲಾಗಿದೆ ಮತ್ತು ಪ್ರತಿ ವ್ಯಾಸಂಗ ವಿಭಾಗಗಳಿಂದ 2 ಕೋರ್ಸು ವಿಷಯಗಳನ್ನು ಗುರುತಿಸಿ ಈ ಸಭೆಯ ಮುಂದೆ ಮಂಡಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದಿಂದ ಒಂದು ಸುತ್ತೋಲೆಯನ್ನು ಹೊರಡಿಸಲಾಗಿತ್ತು. ಕೇವಲ ಒಂದೇ ಒಂದು ಕಾಲೇಜಿನಿಂದ ಮಾಹಿತಿಯು ಬಂದಿದ್ದು, ದೂರವಾಣಿಯ ಮುಖಾಂತರ ಎಲ್ಲಾ ವಿಭಾಗಗಳನ್ನು ಸಂಪರ್ಕಿಸಿ ಮಾಹಿತಿಯನ್ನು ಒಟ್ಟು ಗೂಡಿಸಲಾಗಿದೆ. ಈ ಸಂಬಂದ, ಚಿನ್ನದ ಪದಕ/ನಗದು ಬಹುಮಾನಗಳನ್ನು ಸ್ಥಾಪಿಸುವ ಸಂಬಂಧ ದಾನಿಗಳನ್ನು ಕೋರಲು ಸಿಂಡಿಕೇಟ್ ಸಭೆಯನ್ನು ಕೋರಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ್ ರವರು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಇದು ಮೊದಲನೆಯ ಘಟಿಕೋತ್ಸವ ಆಗಿರುವುದರಿಂದ, ರಾಷ್ಟ್ರಪತಿ ಅಥವಾ ಉಪ-ರಾಷ್ಟ್ರಪತಿ ಅಥವಾ MHRD ಸಚಿವರನ್ನು ಘಟಿಕೋತ್ಸವಕ್ಕೆ ಅತಿಥಿಗಳಾಗಿ ಆಹ್ವಾನಿಸಬಹುದು ಎಂದು ಅಭಿಪ್ರಾಯಪಟ್ಟರು.

**ಸಿಂಡಿಕೇಟ್ ನಿರ್ಣಯ:**

ಚರ್ಚೆಯ ನಂತರ ಪ್ರಸ್ತಾವನೆಯಲ್ಲಿರುವಂತೆ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಿಗೆ ಚಿನ್ನದ ಪದಕಗಳನ್ನು ದಾನಿಗಳ ಮೂಲಕ ಸ್ಥಾಪಿಸಲು ನಿರ್ಣಯಿಸಲಾಯಿತು. ಈ ಸಂಬಂಧ, ದಾನಿಗಳನ್ನು ಸಂಪರ್ಕಿಸಲು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ನಿರ್ದೇಶಿಸಲಾಯಿತು. ಮುಂದುವರೆದು, ದಾನಿಗಳನ್ನು ಗುರುತಿಸಿ ಹೆಚ್ಚಿನ ಚಿನ್ನದ ಪದಕ/ನಗದು ಬಹುಮಾನಗಳನ್ನು ಸ್ಥಾಪಿಸುವ ಸಂಬಂಧ ಈ ಕೆಳಕಂಡ ಸಮಿತಿಯನ್ನು ರಚಿಸಿತು.

| | | |
|---|---|---|
| **1.** | **ಶ್ರೀ. ಕರಣ್ ಕುಮಾರ್** | **ಅಧ್ಯಕ್ಷರು** |
| **2.** | **ಪ್ರೊ. ಎಂ. ಚಿಕ್ಕಮುನಿಯಪ್ಪ** | **ಸದಸ್ಯರು** |
| **3.** | **ಶ್ರೀ. ಥಾಮಸ್ ನೀಲಿಯಾರ** | **ಸದಸ್ಯರು** |
| **4** | **ಪ್ರೊ. ಬಿ. ರಮೇಶ್, ಕುಲಸಚಿವರು (ಮೌ)** | **ಸದಸ್ಯ ಕಾರ್ಯದರ್ಶಿ** |

**ವಿಷಯ ಸಂಖ್ಯೆ-15: ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ ಸ್ಥಾಪನೆ ಕುರಿತು**

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ ಸ್ಥಾಪನೆ ಮಾಡಬೇಕಾಗಿರುವುದರಿಂದ ಪರಿನಿಯಾಮಾಳಿಗಳನ್ನು ರಚಿಸಲು ಒಂದು ಸಮಿತಿಯನ್ನು ರಚಿಸುವ ವಿಷಯವನ್ನು ಸಿಂಡಿಕೇಟ್ ಮುಂದೆ ಮಂಡಿಸಲಾಗಿದೆ ಮತ್ತು ಸಮಿತಿಯನ್ನು ರಚಿಸಿಕೊಡಲು ಕುಲಪತಿಗಳು ಕೋರಿದರು.

**ಸಿಂಡಿಕೇಟ್ ನಿರ್ಣಯ:**

**ಸಭೆಯು ಸರ್ವಾನುಮತದಿಂದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗವನ್ನು ಸ್ಥಾಪಿಸಲು ಪರಿನಿಯಮಗಳನ್ನು ರಚಿಸಲು ಒಂದು ಸಮಿತಿಯನ್ನು ರಚಿಸಲು ಕುಲಪತಿಗಳಿಗೆ ಅಧಿಕಾರವನ್ನು ವಹಿಸಿತು.**

**ವಿಷಯ ಸಂಖ್ಯೆ-16: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕ್ರಿಕೆಟ್ ಮೈದಾನದಲ್ಲಿ ಕ್ರೀಡಾಭ್ಯಾಸಕ್ಕಾಗಿ (Net Practice) ನಿಗದಿಗೊಳಿಸಿರುವ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.**

ಕುಲಸಚಿವರು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕ್ರಿಕೆಟ್ ಮೈದಾನದಲ್ಲಿ ಕ್ರೀಡಾ ಅಭ್ಯಾಸಕ್ಕಾಗಿ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ ಸಿಂಡಿಕೇಟ್ ಸಭೆಯು ಒಂದು ಸಮಿತಿಯನ್ನು ಸದಸ್ಯರಾದ ಶ್ರೀ ಹೆಚ್. ಆರ್. ಸತೀಶ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು ಮತ್ತು ಸಮಿತಿಯನ್ನು ವರದಿಯನ್ನು ಪಡೆಯಲಾಗಿದೆ. ಸಮಿತಿಯು ಒಂದು ವರ್ಷದ ಬಾಡಿಗೆ ಶುಲ್ಕವನ್ನು ಮುಂಗಡವಾಗಿ ಪಡೆಯುವಂತೆ ನಿರ್ಣಯಿಸಿದೆ. ತಿಂಗಳಿಗೆ ರೂ. 20,000/- ದಂತೆ 12 ತಿಂಗಳಿಗೆ ರೂ. 2,24,000/- ಗಳು + ಜಿಎಸ್‌ಟಿ 43,200/- ಗಳನ್ನು ಒಂದೇ ಬಾರಿ ಮುಂಗಡವಾಗಿ ಪಡೆಯಲು ಶಿಫಾರಸ್ಸು ಮಾಡಿದೆ. ಉಳಿದಂತೆ ಇತರೆ ಬಾಡಿಗೆ ಶುಲ್ಕಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.

ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ್ ರವರು ಕ್ರೀಡಾ ಮೈದಾನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ 3 ಮಾರ್ಕರ್‌ಗಳ ಸೇವೆಯನ್ನು ಆಡಳಿತ ವಿಭಾಗಕ್ಕೆ ಪಡೆಯಲಾಗಿದೆ ಎಂದು ತಿಳಿದುಬಂದಿದೆ ಆದುದರಿಂದ ಆ 3 ಮಾರ್ಕರ್‌ಗಳನ್ನು ಹಿಂದರುಗಿಸಲು ಕೋರಿದರು.

ಕುಲಸಚಿವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೇರಿರುವ ಒಂದು Grass Cutting Mission ಮೈದಾನದಲ್ಲಿ ಇದೆ ಇದನ್ನು ರಿಪೇರಿ ಮಾಡಿಸಿ ಉಪಯೋಗಿಸುವ ಸಲುವಾಗಿ ರಿಪೇರಿ ಮಾಡುವವರನ್ನು ಬಂದು ನೋಡಲು ಕೋರಲಾಗಿ ಅವರು ಬಂದು ನೋಡಲು ರೂ. 1,500/- ಗಳನ್ನು ನೀಡಬೇಕಾಗಿರುವುದೆಂದು ತಿಳಿಸಿರುತ್ತಾರೆ. ರೂ. 1,500/- ಗಳನ್ನು ನೀಡುವುದಾಗಿ ಹೇಳಿ ಬಂದು ನೋಡಲು ತಿಳಿಸಲಾಗಿದೆ. ರಿಪೇರಿ ಮಾಡಿ ಉಪಯೋಗಿಸಲು ಅವಕಾಶ ವಿದ್ದರೆ ರಿಪೇರಿ ಮಾಡಿಸಿ ಮಿಷಿನ್‌ನ್ನು ಉಪಯೋಗಿಸಲಾಗುವುದು ಎಂದು ತಿಳಿಸಿದರು. ಕುಲಪತಿಗಳು ಕೆಲವು ಸಂಸ್ಥೆಗಳು ಒಂದೇ ಬಾರಿ ಮುಂಗಡವಾಗಿ ಶುಲ್ಕವನ್ನು ಸಂದಾಯ ಮಾಡಲು ಕಷ್ಟವಾಗುವುದರಿಂದ ಕಂತುಗಳಲ್ಲಿ (Installment) ಕಟ್ಟಲು ಕೋರಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

**ಸಿಂಡಿಕೇಟ್ ನಿರ್ಣಯ:**

**ಸಿಂಡಿಕೇಟ್ ಸಭೆಯು ಸಮಿತಿಯ ವರದಿಯನ್ನು ಅನುಮೋದಿಸಿ ಮುಂಗಡ ಹಣವನ್ನು 4 ಕಂತುಗಳಲ್ಲಿ ಪಡೆಯಲು ನಿರ್ಣಯಿಸಿತು.**

**ವಿಷಯ ಸಂಖ್ಯೆ-17: ಸ್ವಚ್ಛತಾ ಕಾರ್ಯಗಳಿಗಾಗಿ ನೀಡಿರುವ ಗುತ್ತಿಗೆ ಅವಧಿಯನ್ನು ದಿನಾಂಕ 01.02.2021 ರಿಂದ ನೂತನ ಗುತ್ತಿಗೆದಾರರು ಆಯ್ಕೆಯಾಗಿ ಕಾರ್ಯನಿರ್ವಹಿಸುವ ತನಕ ಮುಂದುವರೆಸುವ ಬಗ್ಗೆ**

ಕುಲಸಚಿವರು ದಿನಾಂಕ 30.11.2020 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸ್ವಚ್ಛತಾ ಕಾರ್ಯಗಳಿಗಾಗಿ ನೀಡಿರುವ ಗುತ್ತಿಗೆ ಅವದಿಯು ಮುಗಿದಿರುವುದರಿಂದ 31.01.2021 ರ ವರೆಗೆ ಮಂದುವರೆಸಿ ಸಂಭಾವನೆ ನೀಡಲು ನಿರ್ಣಯಿಸಲಾಗಿತ್ತು. ನೂತನ ಟೆಂಡರ್ ಪ್ರಕ್ರಿಯೆಗಳು ತಾಂತ್ರಿಕ ಕಾರಣಗಳಿಂದ ಅಂತಿಮ ಹಂತಕ್ಕೆ ತಲುಪದೇ ಇರುವುದರಿಂದ ಮತ್ತು ಕಛೇರಿಯ ಸ್ವಚ್ಛತೆಯ ದೃಷ್ಠಿಯಿಂದ ಈಗಿರುವ ಸಂಸ್ಥೆಯನ್ನು ನೂತನ ಗುತ್ತಿಗೆದಾರರು ಆಯ್ಕೆಯಾಗಿ ಕಾರ್ಯಾದೇಶ ನೀಡುವವರೆಗೂ ಮುಂದುವರೆಸಲು ಸಭೆಯ ಅನುಮತಿಯನ್ನು ಕೋರಿದರು.

**ಸಿಂಡಿಕೇಟ್ ನಿರ್ಣಯ:**

**ಸಭೆಯು ಸರ್ವಾನುಮತದಿಂದ ಪ್ರಸ್ತಾವನೆಯನ್ನು ಒಪ್ಪಿ ಕಛೇರಿಯ ಸ್ವಚ್ಛತಾ ದೃಷ್ಠಿಯಿಂದ ಮೆ. ಟೋಟಲ್ ಸಲ್ಯೂಷನ್ ಅವರ ಗುತ್ತಿಗೆ ಅವಧಿಯನ್ನು ನೂತನ ಗುತ್ತಿಗೆದಾರರು ಆಯ್ಕೆಯಾಗಿ ಕಾರ್ಯಾದೇಶ ನೀಡುವವರೆಗೆ ಮುಂದುವರೆಸಲು ನಿರ್ಣಯಿಸಿತು.**

**ವಿಷಯ ಸಂಖ್ಯೆ-18: M/s Logisys ಸಂಸ್ಥೆಗೆ ರೂ 2,74,70,167/- ಮತ್ತು M/s Uniclare ಸಂಸ್ಥೆಗೆ ರೂ 1,76,88,798/- ಬಾಕಿ ಪಾವತಿ ಮಾಡುವ ಬಗ್ಗೆ**

ಕುಲಸಚಿವರು (ಮೌಲ್ಯಮಾಪನ) ರವರು Logysis ಸಂಸ್ಥೆಯು ರೂ, 2,74,70,167/- ಮತ್ತು Uniclare ರವರು ರೂ.1,76,88,798/- ಬಾಕಿ ಪಾವತಿ ಮಾಡದೆ ಇರುವುದರ ಬಗ್ಗೆ Legal notice ನ್ನು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನೀಡಿದ್ದಾರೆ. Legal notice ಮೇಲೆ ಯಾವುದೇ ಕ್ರಮ ಜರುಗಿಸದಿದ್ದರೆ ನಂತರ ನ್ಯಾಯಾಲಯಕ್ಕೆ ಹೋಗುವ ಸಂಬಂವ ಕಂಡು ಬರುವುದರಿಂದ, ಈ ಸಂಸ್ಥೆಗಳಿಗೆ ಬಾಕಿ ಇರುವ ಹಣವನ್ನು ಪಾವತಿ ಮಾಡುವ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಸಭೆಗೆ ಮನವಿ ಮಾಡಿಕೊಂಡರು.

ಸಭಾಧ್ಯಕ್ಷರು M/s Logysis ಮತ್ತು M/s Uniclare ರವರಿಗೆ ಬಾಕಿ ನೀಡಬೇಕಾಗಿರುವ ಹಣವನ್ನು ನೀಡದ ತಡೆಹಿಡಿದರೆ, ಅವರು ನ್ಯಾಯಾಲಯದಿಂದ ಬಡ್ಡಿ ಸಮೇತ ಬಾಕಿ ಹಣವನ್ನು ಸಂದಾಯ ಮಾಡಲು ಆದೇಶ ತಂದರೆ, ವಿಶ್ವವಿದ್ಯಾಲಯವು ಬಡ್ಡಿ ಹಣವನ್ನು ನೀಡಲು ಜವಾಬ್ದಾರಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಈ ವಿಷಯದ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಮನವಿ ಮಾಡಿದರು.

ಸದಸ್ಯರಾದ ಜ್ಯೋತಿ ವಿಜಯ್ ರವರು ಮಾತನಾಡುತ್ತಾ, ಈಗಾಗಲೇ ಈ ವಿಷಯಕ್ಕೆ ಸಂಬಂಧಿಸಿದಂತೆ One Man Committee ಪ್ರಕ್ರಿಯೆ ನಡೆಯುತ್ತಿರುವುದರಿಂದ ಸಮಿತಿ ವರದಿ ಸಲ್ಲಿಸಿದ ನಂತರ ಈ ಸಂಬಂಧ ನಿರ್ಣಯ ಮಾಡುವುದು ಸರಿಯಾದುದಾಗಿದೆ ಎಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಮಾತನಾಡಿ, ಈ ವಿಷಯಕ್ಕೆ ಸಂಬಂಧಿಸಿದಂತೆ, One Man Committee ವರದಿಯ ನಂತರ ಹಣಪಾವತಿಗಾಗಿ ಕ್ರಮವಹಿಸಬಹುದು. ನ್ಯಾಯಾಲಯಕ್ಕೆ ಹೋಗಬಹುದು ಎಂದು ತಿಳಿದು, ಬಾಕಿ ಹಣವನ್ನು ಪಾವತಿಸುವುದು ಬೇಡ ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶಗಳು ಸುಮಾರು 5 ವರ್ಷಗಳ ವರೆಗೆ ಬಾಕಿ ಇದ್ದು, ಯಾವುದೇ ರೀತಿ ಇತ್ಯರ್ಥವಾಗದೇ ಇರುವ ಸಂದರ್ಭಗಳನ್ನು ನಾವು ಕಾಣಬಹುದು ಎಂದು ತಿಳಿಸಿದರು.

ಈ ಸಂಬಂಧ ಅಭಿಪ್ರಾಯ ವ್ಯಕ್ತಪಡಿಸಿದ ಶ್ರೀ. ಹರಿಪ್ರಸಾದ್ ರವರು ಸದರಿ ಸಂಸ್ಥೆಗಳು ಪರೀಕ್ಷಾ ಸೇವೆಗಳನ್ನು ನೀಡುತ್ತಿರುವುದರಿಂದ, ಅವರಿಗೆ ಪಾವತಿಸಬೇಕಾದ ಬಾಕಿ ಹಣವನ್ನು ಪಾವತಿಸಬೇಕಾಗುತ್ತದೆ ಎಂದು ನಾನು ಕಳೆದ ಸಭೆಯಲ್ಲಿಯೇ ಪ್ರಸ್ತಾಪಿಸಿದ್ದೇನೆ ಸೇವೆಗಳನ್ನು ನೀಡಿದ ಸಂಸ್ಥೆಗಳಿಗೆ ಹಣ ಪಾವತಿ ಬಾಕಿ ಇಡುವುದು ಸಮಂಜಸವಲ್ಲವಾದುದರಿಂದ, ಸದರಿ ಸಂಸ್ಥೆಗಳಿಗೆ ಬಾಕಿ ಹಣವನ್ನು ನೀಡಬಹುದು ಎಂದು ಅಭಿಪ್ರಾಯಿಸಿದರು.

ಸದಸ್ಯರಾದ ಡಾ. ಹೆಚ್. ಟಿ. ಅರವಿಂದ್ ರವರು ಮಾತನಾಡಿ, ಈ ಸಂಸ್ಥೆಗಳು ನೀಡುತ್ತಿರುವ ಸೇವೆಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಆಗಿರುವ ಇತಿಮಿತಿಗಳ ಭಾಗ ಪ್ರತ್ಯೇಕವಾಗಿದ್ದು, ಸೇವೆ ನೀಡುತ್ತಿರುವ ಸಂಸ್ಥೆಗಳಿಗೆ ನೀಡುವ ಬಾಕಿ ಹಣಕ್ಕೆ ಸಂಬಂಧ ಕಲ್ಪಿಸುವುದು ಸರಿಯಾದ ಕ್ರಮವಲ್ಲ ಆದುದರಿಂದ, ಬಾಕಿ ಹಣವನ್ನು ನೀಡಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಡಾ. ಲಿಡಿಯಾ ಪಿ ಸ್ಯಾಮುಯೆಲ್ ರವರು ಸೇವೆ ಪಡೆದಿರುವುದರಿಂದ ಬಾಕಿ ಹಣವನ್ನು ಪಾವತಿಸಬೇಕು ಎಂದು ಅವರ ಅಭಿಪ್ರಾಯ ತಿಳಿಸಿದರು.

ಸದಸ್ಯರಾದ ಪ್ರೊ. ರಮೇಶ್, ಪ್ರೊ. ಚಿಕ್ಕಮುನಿಯಪ್ಪ, ಪ್ರೊ. ಪದ್ಮಜ, ಪ್ರೊ. ಚಂದ್ರನಾಥ್, ಪ್ರೊ. ಶ್ರೀನಿವಾಸಯ್ಯ ರವರೂ ಸಹ ಬಾಕಿ ಹಣವನ್ನು ಪಾವತಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ಸಿಂಡಿಕೇಟ್ ನಿರ್ಣಯ:**

**ಬೆಂಗಳೂರು ನಗರ ವಿಶ್ವವಿದ್ಯಾನಿಲಯವು M/s Logysis ಸಂಸ್ಥೆಯವರ Examination Process Management ಸೇವೆಗಳಿಗೆ, M/s Uniclare ಸಂಸ್ಥೆಯವರ E-Governance in Examination ಸೇವೆಗಳಿಗೆ ದಿನಾಂಕ:30.08.2018 ರಂದು ಮಾಡಿಕೊಂಡಿರುವ ಕರಾರು ಒಪ್ಪಂದದಂತೆ ಅವರು ನೀಡಿರುವ ಸೇವೆಗಳಿಗೆ ಪಾವತಿಸಬೇಕಾದ ಬಾಕಿ ಮೊತ್ತವನ್ನು ಪ್ರಸ್ತಾವನೆಯಲ್ಲಿರುವಂತೆ ಪಾವತಿಸಲು ಬಹುಮತದಿಂದ ನಿರ್ಣಯಿಸಲಾಯಿತು.**

ಸದಸ್ಯರಾದ ಶ್ರೀ ಕರಣ್ ಕುಮಾರ್ ಮತ್ತು ಶ್ರೀಮತಿ ಜ್ಯೋತಿ ವಿಜಯ್ ರವರು ಅವರ ಈ ನಿರ್ಣಯಕ್ಕೆ ಅವರ ಅಸಮ್ಮತಿಯನ್ನು ಸೂಚಿಸಿದರು ಮತ್ತು ಲಿಖಿತವಾದ ಅಸಮ್ಮತಿ ಪತ್ರವನ್ನು ಕುಲಸಚಿವರಿಗೆ ಇ–ಮೇಲ್ ಮುಖಾಂತರ ಸಲ್ಲಿಸಿರುತ್ತಾರೆ.

**ವಿಷಯ ಸಂಖ್ಯೆ-19: Proceedings of the 5th Finance Committee Meeting held on 12.02.2021**

1. **ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಗೆ ಸಾದಿಲ್ವಾರು (contingency) ಮೊತ್ತವನ್ನು ಹೆಚ್ಚಿಸುವ ಬಗ್ಗೆ**

ಸಭಾಧ್ಯಕ್ಷರು ಎಲ್ಲಾ ವಿಭಾಗಗಳಿಗೆ ದೂರವಾಣಿ/ಅಂತರ್ಜಾಲ ವ್ಯವಸ್ಥೆ ಒದಗಿಸಿರುವುದರಿಂದ ಸಂಬಂಧಪಟ್ಟ ವಿಭಾಗಗಳ ಖರ್ಚು ವೆಚ್ಚಗಳು ಹೆಚ್ಚಾಗಿರುವುದರಿಂದ ಆ ವೆಚ್ಚಗಳನ್ನು ಪೂರೈಸಲು ರೂ, 5,000/-ಗಳು ಇರುವ ವಿಭಾಗಗಳಿಗೆ ರೂ, 10,000/- ಗಳು ಮತ್ತು ರೂ, 10,000/- ಗಳು ಇರುವ ವಿಭಾಗಗಳಿಗೆ ರೂ, 15,000/- ಗಳು ಹೆಚ್ಚುವರಿ ಮಾಡಿಕೊಡಲು ಹಣಕಾಸು ಸಮಿತಿ ಅನುಮೋದಿಸಿದೆ. ಆದುದರಿಂದ ಈ ಪ್ರಸ್ತಾವನೆಯನ್ನು ಅಂಗೀಕರಿಸಲು ಕೋರಿದರು.

**ಸಿಂಡಿಕೇಟ್ ನಿರ್ಣಯ:**

**ಸಭೆಯು ಸರ್ವಾನುಮತದಿಂದ ಹಣಕಾಸು ಸಮಿತಿಯ ನಿರ್ಣಯವನ್ನು ಅಂಗೀಕರಿಸಿ ಶೈಕ್ಷಣಿಕ ವಿಭಾಗಗಳಿಗೆ ಸಾದಿಲ್ವಾರು ಮೊತ್ತವನ್ನು ರೂ, 5,000/-ಗಳ ಬದಲು ರೂ, 10,000/- ಗಳನ್ನು ಮತ್ತು ರೂ, 10,000/-ಗಳ ಬದಲು ರೂ,15,000/-ಗಳನ್ನು ಹೆಚ್ಚುವರಿ Contingency ಮಾಡಿಕೊಡಲು ನಿರ್ಣಯಿಸಿತು.**

2. ಸಿಂಡಿಕೇಟ್ ಸದಸ್ಯರುಗಳಿಗೆ ಹಾಗೂ ಇತರೆ ಸಭಾ ಸದಸ್ಯರುಗಳಿಗೆ ಸಭಾ ಭತ್ಯೆ ಇತ್ಯಾದಿ ಭತ್ಯೆಗಳನ್ನು ಪಾವತಿಸಲು ಹಣದ ಕೊರತೆಯಾಗಿದ್ದು, ಹಣ ಉಳಿಕೆಯಾಗುವ ಇತರೆ ಲೆಕ್ಕಶೀರ್ಷಿಕೆಗಳಿಂದ ಮರು ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ

ಸಿಂಡಿಕೇಟ್ ಸದಸ್ಯರುಗಳಿಗೆ ಹಾಗೂ ಇತರೆ ಸಭಾ ಸದಸ್ಯರುಗಳಿಗೆ ಸಭಾ ಭತ್ಯೆ ಇತ್ಯಾದಿ ಭತ್ಯೆಗಳನ್ನು ಪಾವತಿಸಲು ಹಣದ ಕೊರತೆಯಾಗಿದ್ದು, ಹಣ ಉಳಿಕೆಯಾಗುವ ಇತರೆ ಲೆಕ್ಕ ಶೀರ್ಷಿಕೆಗಳಿಂದ ಮರು ಹೊಂದಾಣಿಕೆ ಮಾಡಿಕೊಳ್ಳಲು ಕುಲಸಚಿವರು ಅನುಮತಿ ಕೋರಿದರು.

**ಸಿಂಡಿಕೇಟ್ ನಿರ್ಣಯ:**

**ಹಣಕಾಸು ಸಮಿತಿಯು ದಿನಾಂಕ 12.02.2021ರಂದು ಅನುಮೋದಿಸಿರುವಂತೆ "ಲೆಕ್ಕ ಶೀರ್ಷಿಕೆ" 027-123 ರಲ್ಲಿ ಬಾಕಿ ಉಳಿದಿರುವ ರೂ. 20,07,335/- ರಲ್ಲಿ "ಲೆಕ್ಕ ಶೀರ್ಷಿಕೆ" 027-119 ರೂ. 5,00,000/- ಲಕ್ಷ ಹಾಗೂ "ಲೆಕ್ಕ ಶೀರ್ಷಿಕೆ" 027-127 ಕ್ಕೆ ರೂ. 5,00,000/- ಲಕ್ಷ ಮರು ಹೊಂದಾಣಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

3. "Advertisement charges for General Administration" ಲೆಕ್ಕಶೀರ್ಷಿಕೆಯಡಿ ಪಾವತಿಗೆ ಹಣದ ಕೊರತೆಯಾಗಿದ್ದು, ಹಣ ಉಳಿಕೆಯಾಗುವ ಇತರೆ ಲೆಕ್ಕಶೀರ್ಷಿಕೆಗಳಿಂದ ಮರು ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ

2020-21 ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆಯಲ್ಲಿ Advertisement Charges for General Advertisement ಗಾಗಿ ರೂ, 10,00,000/-ಲಕ್ಷ ಹಂಚಿಕೆಯಾಗಿರುತ್ತದೆ. ರೂ, 10,00,000/-ಲಕ್ಷ ಖರ್ಚಾಗಿದ್ದು ಈ ಲೆಕ್ಕ ಶೀರ್ಷಿಕೆಯಲ್ಲಿ ಬಾಕಿ ಹಣ ಉಳಿದಿರುವುದಿಲ್ಲ ಮತ್ತು ರೂ, 5,98,552/- ಬಿಲ್ಲುಗಳ ಪಾವತಿ ಬಾಕಿ ಇರುವುದರಿಂದ ರೂ, 6,00,000/- ಲಕ್ಷಗಳನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿ ಕೋರಿದರು.

ಸಿಂಡಿಕೇಟ್ ನಿರ್ಣಯ:

ಸಭೆಯು ದಿನಾಂಕ 12.02.2021ರಂದು ನಡೆದ 5ನೇ **Finance Committee** ನಿರ್ಣಯವನ್ನು ಅಂಗೀಕರಿಸಿ ಸರ್ವಾನುಮತದಿಂದ ರೂ. **6,00,000/-** ಲಕ್ಷ ಹಣವನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿಸಿತು.

4. ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ 2020-21ನೇ ಸಾಲಿನಲ್ಲಿ ಹಂಚಿಯಾಗಿರುವ SCSP/TSP ಯೋಜನೆಯಡಿಯಲ್ಲಿ ಖರ್ಚಾಗದೇ ಉಳಿದಿರುವ ಅನುದಾನವನ್ನು ಸರ್ಕಾರದ ಆದೇಶದಂತೆ ಮರು ಹೊಂದಾಣಿಕೆ ಮಾಡಿಕೊಂಡು ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡದ ಮೊದಲನೆ ವರ್ಷದ ವಿದ್ಯಾರ್ಥಿಗಳಿಗೆ ಹಾಗೂ ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಿ ವಿತರಿಸುವ ಬಗ್ಗೆ.

2020-21ನೇ ಸಾಲಿಗೆ ಹಂಚಿಕೆಯಾಗಿರುವ SCSP/TSP ಯೋಜನೆಯಡಿ ಖರ್ಚಾಗದೆ ಉಳಿದಿರುವ ರೂ. 44 ಲಕ್ಷಗಳನ್ನು ಸರ್ಕಾರದ ಆದೇಶದಂತೆ ಮರು ಹೊಂದಾಣಿಕೆ ಮಾಡಿಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೊದಲನೆ ವರ್ಷದ ವಿದ್ಯಾರ್ಥಿಗಳಿಗೆ ಹಾಗೂ Ph.D ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್‌ನ್ನು ಖರೀದಿಸಿ ವಿತರಿಸಲು ಲೆಕ್ಕ ಶೀರ್ಷಿಕೆ Establishment of Ambedkar Studies Center ನಲ್ಲಿ ಲಭ್ಯವಿರುವ ರೂ, 20,00,000/- ಲಕ್ಷಗಳನ್ನು ಬಳಕೆ ಮಾಡಿಕೊಳ್ಳಲು ಕುಲಪತಿಗಳು ಸಭೆಯ ಅನುಮತಿ ಕೋರಿದರು.

ಸಿಂಡಿಕೇಟ್ ನಿರ್ಣಯ:

ಹಣಕಾಸು ಸಮಿತಿಯ ನಿರ್ಣಯವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿ "ಲೆಕ್ಕ ಶೀರ್ಷಿಕೆ **B-223 Establishment of Ambedkar Studies Centre" (New Scheme)** ಅಡಿಯಲ್ಲಿ ಲಭ್ಯವಿರುವ ರೂ. **20,00,000/-** ಮೊತ್ತದಲ್ಲಿ ರೂ. **16.00** ಲಕ್ಷ ಬಳಸಿಕೊಳ್ಳಲು ಒಂದು ವೇಳೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಲ್ಲಿ ರೂ. **20.00** ಲಕ್ಷಗಳನ್ನು ಸಂಪೂರ್ಣವಾಗಿ ಬಳಸಿಕೊಂಡು ಲ್ಯಾಪ್‌ಟಾಪ್ ಗಳನ್ನು ಖರೀದಿಸಿ ವಿತರಿಸಲು ಸರ್ವಾನುಮತದಿಂದ ಸಭೆಯು ನಿರ್ಣಯಿಸಿತು.

5. ದಿನಾಂಕ 19.08.2020 ರಂದು ಅಪರಾಹ್ನ 3.30 ಗಂಟೆಗೆ ಜರುಗಿದ 4ನೇ ಹಣಕಾಸು ಸಮಿತಿಯ ಸಭೆಯ ನಡಾವಳಿ ವಿಷಯ ಸಂಖ್ಯೆ 1 ರಲ್ಲಿ ಬಿಟ್ಟು ಹೋಗಿರುವ ವಿಷಯವನ್ನು ಸೇರಿಸಲು ಹಾಗೂ 2 ಸಲ ಪುನರಾವರ್ತಿತವಾದ 1 ವಿಷಯವನ್ನು ತೆಗೆಯುವ ಬಗ್ಗೆ.

ಕುಲಸಚಿವರು ಪರಿನಿಯಮಗಳಲ್ಲಿ ಬಿಟ್ಟು ಹೋಗಿರುವ ಪರಿನಿಯಮವನ್ನು ಸೇರ್ಪಡೆ ಮಾಡಿಕೊಳ್ಳಲು ಮತ್ತು ಮನಾವರ್ತಿವಾಗಿರುವ ಪರಿನಿಯಮವನ್ನು ಕೈ ಬಿಡಲು ಹಣಕಾಸು ಸಮಿತಿಯಲ್ಲಿ ನಿರ್ಣಯಿಸಿರುವುದರಿಂದ ಹಣಕಾಸು ಸಮಿತಿಯ ನಿರ್ಣಯವನ್ನು ಅಂಗೀಕರಿಸಲು ಕೋರಿದರು.

ಸಿಂಡಿಕೇಟ್ ನಿರ್ಣಯ:

ಸಭೆಯು ಸರ್ವಾನುಮತದಿಂದ ಅಂಗೀರಿಸಿತು

**ವಿಷಯ ಸಂಖ್ಯೆ-20: Application of Presidency College for getting Autonomous Status under Section 2(F) of UGC Act 1956**

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು 2018 UGC Regulation ಪ್ರಕಾರ ವಿಶ್ವವಿದ್ಯಾನಿಲಯವು ಅವರ ಅರ್ಜಿಯನ್ನು ಯು.ಜಿ.ಸಿಗೆ ಕಳುಹಿಸಿಕೊಡಲು, Expert Committee / ಬೇರೆ ಬೇರೆ Statutory Bodies Nominee ಕೊಡಲು ಅವಕಾಶವಿದೆ. 30 ದಿನಗಳ ಒಳಗೆ autonomous status ಆದೇಶವನ್ನು ವಿಶ್ವವಿದ್ಯಾನಿಲಯವು ಹೊರಡಿಸಬೇಕು ಇಲ್ಲದಿದ್ದರೆ ಸಂಬಂಧ ಪಟ್ಟ ಕಾಲೇಜು ಅಟಾನಮಸ್ ಕಾಲೇಜೆಂದು

ಪರಿಗಣಿಸಲು ವಿಶ್ವವಿದ್ಯಾನಿಲಯದ ಕಡೆಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ (No Objection) ಎಂದು ತಿಳಿಸಿದರು.

ಯು.ಜಿ.ಸಿ ನಿಯಮಾವಳಿ 3.5. ರಂತೆ "Autonomous Colleges need not pay affiliation fee to the Parent University every year onetime fee can be paid at the time of conferment of Autonomous Status, such fees can be decided by the executive council of the Parent University". ಆದುದರಿಂದ ಈ ಸಭೆಯಲ್ಲಿ conferment fees ನ್ನು ನಿಗದಿ ಮಾಡಬೇಕೆಂದು ಅಭಿಪ್ರಾಯಪಟ್ಟರು.

ಕುಲಸಚಿವರು (ಮೌ) ಪ್ರಸ್ತುತ ಸಂಯೋಜನೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶುಲ್ಕದ ಆಧಾರದ ಮೇರೆಗೆ 10% ಹೆಚ್ಚುವರಿ ಲೆಕ್ಕ ಮಾಡಿ, 10 ವರ್ಷಗಳಿಗೆ ಸಂಬಂಧಿಸಿದಂತೆ ಶುಲ್ಕವನ್ನು ಪಡೆಯುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಶ್ರೀ. ಟಿ. ಹೆಚ್. ಶ್ರೀನಿವಾಸಯ್ಯನವರು ಸಾಮಾನ್ಯ ಸಂಯೋಜನೆ ಪ್ರತಿ ವರ್ಷ 10% ಹೆಚ್ಚುವರಿ ಶುಲ್ಕವನ್ನು ನಿಗದಿ ಪಡಿಸಿಲಾಗುವುದು. ಈ ಸಂಸ್ಥೆಯು ಅಟನಾಮಸ್ ಆಗಿರುವುದರಿಂದ ಮತ್ತು 10 ವರ್ಷಗಳಿವರೆಗೆ ಅಟನಾಮಸ್ ಸ್ಟೇಟಸ್ ಇರುವುದರಿಂದ 10% ಬದಲು 25% ಶುಲ್ಕವನ್ನು ಹೆಚ್ಚಿಸಬಹುದು ಎಂದು ಅಭಿಪ್ರಾಯಟ್ಟರು.

ಸದಸ್ಯರಾದ ಡಾ. ಲಿಡಿಯಾ ಪಿ. ಸ್ಯಾಮುಯೆಲ್ ಯು.ಜಿ.ಸಿ ನಿಯಮಾವಳಿಗಳಂತೆ ಶುಲ್ಕವನ್ನು ಪಡೆಯದಿದ್ದರೆ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊಡೆತ ಆಗುತ್ತದೆ ಎಂದು ತಿಳಿಸಿದರು.

ಸದಸ್ಯರಾದ ಡಾ. ಹೆಚ್. ಟಿ. ಅರವಿಂದ್ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಿಗದಿಪಡಿಸಿರುವ ಶುಲ್ಕಕ್ಕೆ 10% ಹೆಚ್ಚುವರಿ ಶುಲ್ಕವನ್ನು ಸೇರಿಸಿ (conferment ಶುಲ್ಕವನ್ನು) ಪಡೆಯಬಹುದು ಎಂದು ತಿಳಿಸಿದರು.

ಸಭಾಧ್ಯಕ್ಷರು ಪ್ರಸ್ತುತ ಈ ಸಂಸ್ಥೆಯವರು ಒಂದು ಮನವಿ ಪತ್ರವನ್ನು ನೀಡಿರುವುದಾಗಿ ತಿಳಿಸಿ, 10 ವರ್ಷದ ಶುಲ್ಕವನ್ನು ಒಂದೇ ಬಾರಿ ತುಂಬಲು ಕಷ್ಟವಾಗುವುದರಿಂದ, ಕಾಲಾವಕಾಶ ನೀಡಿ ಪ್ರತಿ ವರ್ಷ ಶುಲ್ಕವನ್ನು ಭರಿಸಲು ಅನುಮತಿ ಕೋರಿದ್ದಾರೆ ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

**ಸುದೀರ್ಘ ಚರ್ಚೆಯ ನಂತರ, ಯು.ಜಿ.ಸಿ ನಿಯಮಾವಳಿಗಳಂತೆ On sight visit ಇಲ್ಲ Existing Annual Affiliation Fees ಗೆ 10% ಹೆಚ್ಚುವರಿ ಶುಲ್ಕವನ್ನು ಸೇರಿಸಿ, ಶುಲ್ಕವನ್ನು Course wise ನಿಗದಿಪಡಿಸಲು ಮತ್ತು ಸದರಿ ಸಂಸ್ಥೆಯು ಮಾಡಿಕೊಂಡಿರುವ ಮನವಿಯಂತೆ ವಾರ್ಷಿಕವಾಗಿ ಸಂಯೋಜನಾ ಶುಲ್ಕವನ್ನು ಪಡೆಯಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. ಈ ಶುಲ್ಕವು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಎಲ್ಲಾ ಅಟಾನಮಸ್ ಕಾಲೇಜುಗಳಿಗೆ ಅನ್ವಯಿಸುವುದಾಗಿ ನಿರ್ಣಯಿಸಿತು.**

**ವಿಷಯ ಸಂಖ್ಯೆ-21: Charan's B.Ed College, Bengaluru proposal initiated under Section 63(3) of the Karnataka State Universities Act, 2000 for withdrawal of affiliation.**

ಚರಣ್ ಬಿ.ಎಡ್ ಕಾಲೇಜಿಗೆ ಸಂಯೋಜನೆಯನ್ನು ಹಿಂಪಡೆಯುವ ಬಗ್ಗೆ ದಿನಾಂಕ 30.11.2020 ರಂದು ನಡೆದ ಸಿಂಡಿಕೇಟ್ ಸಭೆಯು ನಿರ್ಣಯಿಸಿದಂತೆ ಕ್ರಮ ಜರುಗಿಸಿರುವ ಬಗ್ಗೆ ದಿನಾಂಕ 21.01.2021 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಗಮನಕ್ಕೆ ತರಲಾಗಿದೆ. ಚರಣ್ ಬಿ.ಎಡ್ ಕಾಲೇಜಿಗೆ ಸಂಯೋಜನೆಯನ್ನು Karnataka State University Act Section 63(3) ರಂತೆ ಹಿಂಪಡೆಯುವ ಬಗ್ಗೆ ವಿದ್ಯಾವಿಷಯಕ ಪರಿಷತ್ತು ಅನುಮೋದನೆ ನೀಡಿದೆ. ಪ್ರಸ್ತುತ ಅಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಬೇರೆ ಬೇರೆ ವಿದ್ಯಾಸಂಸ್ಥೆಗಳಿಗೆ

ಹೊಂದಾಣಿಕೆ ಮಾಡುವ ಬಗ್ಗೆ ಸಿಂಡಿಕೇಟ್ ಸಭೆಯ ಮುಂದೆ ವಿಷಯವನ್ನು ಮಂಡಿಸಲಾಗಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

**ಸಭೆಯು ಸರ್ವಾನುಮತದಿಂದ ವಿದ್ಯಾರ್ಥಿಗಳನ್ನು ಬೇರೆ ಕಾಲೇಜುಗಳಿಗೆ ಹೊಂದಾಣಿಕೆ ಮಾಡಿಕೊಡಲು ಅನುಮತಿಸಿತು.**

**ವಿಷಯ ಸಂಖ್ಯೆ–22: ಸ್ವಾಯತ್ತತೆ ಪಡೆಯಲು / ನವೀಕರಿಸಲು ಪಾವತಿಸಬೇಕಾದ ಶುಲ್ಕಗಳ ನಿಗಧೀಕರಣ**

**ಸಿಂಡಿಕೇಟ್ ನಿರ್ಣಯ:**

**ವಿಷಯ ಸಂಖ್ಯೆ 20 ರಲ್ಲಿ ನಿರ್ಣಯಿಸಿರುವಂತೆ Course Wise Existing Annual Affiliation Fees ಗೆ 10% ಹೆಚ್ಚುವರಿ ಶುಲ್ಕವನ್ನು ಸೇರಿಸಿ, ಶುಲ್ಕವನ್ನು ನಿಗಧಿಪಡಿಸಲು ನಿರ್ಣಯಿಸಲಾಯಿತು. ಈ ಶುಲ್ಕವು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಎಲ್ಲಾ ಅಟಾನಮಸ್ ಕಾಲೇಜುಗಳಿಗೆ ಅಳವಡಿಸಿಕೊಳ್ಳಲು ನಿರ್ಣಯಿಸಿತು.**

**ಇತರೆ:–**

ವಿಶ್ವವಿದ್ಯಾನಿಲಯದ ಗೀತೆ ಮತ್ತು ಧ್ಯೇಯವಾಕ್ಯವನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯದ ಲಾಂಛನವನ್ನು ಮರುಪರಿಶೀಲಿಸಬೇಕಾದ ವಿಷಯವನ್ನು ಸಭಾಧ್ಯಕ್ಷರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಸಂಬಂಧ, ಚರ್ಚಿಸಿದ ಸಭೆಯು ಸದರಿ ವಿಷಯದ ಬಗ್ಗೆ ಅಧ್ಯಯನ ಮಾಡಿ ವಿಶ್ವವಿದ್ಯಾನಿಲಯಕ್ಕೆ ವರದಿ ಸಲ್ಲಿಸುವ ಸಂಬಂಧ ಈ ಕೆಳಗಿನಂತೆ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.

| | | |
|---|---|---|
| 1. | ಶ್ರೀ. ಆರ್. ಕೆ. ಚಂದ್ರನಾಥ್ | ಅಧ್ಯಕ್ಷರು |
| 2. | ಡಾ. ಪಿ. ವಿ. ಪದ್ಮಜಾ | ಸದಸ್ಯರು |
| 3. | ಡಾ: ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 4. | ಶ್ರೀಮತಿ. ಜ್ಯೋತಿ ವಿಜಯ್ | ಸದಸ್ಯರು |
| 5. | ಪ್ರೊ. ಬಿ.ರಮೇಶ್, ಕುಲಸಚಿವರು (ಮೌ) | ಸದಸ್ಯ ಕಾರ್ಯದರ್ಶಿ |

ಕುಲಸಚಿವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು

ಸಹಿ/–
ಕುಲಸಚಿವರು ಮತ್ತು
ಸದಸ್ಯ ಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ